

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ    ಸಂಪುಟ : 14 ಸಂಚಿಕೆ : 7 ಪುಟ 8    ಸುತ್ತೂರು ಶ್ರೀಕ್ಷೇತ್ರ    ಭಾನುವಾರ, 26 ಜನವರಿ 2020

ಸುತ್ತೂರು ಶ್ರೀಕ್ಷೇತ್ರ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಶನಿವಾರದ ಕಾರ್ಯಕ್ರಮಗಳು ಜರುಗಿದವು.





ಚಿತ್ರಕಲಾ ಸ್ಪರ್ಧೆ ಉದ್ಘಾಟನೆ: ಜಗದ್ಗುರುಗಳವರು, ಶ್ರೀ ಸದ್ಗುರು ಬೋಧಿನಾಥ ವೇಲಾಯನ ಸ್ವಾಮಿಗಳು, ಡಾ. ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹೆಚ್. ವೆಂಕಟೇಶ್, ಶ್ರೀಮತಿ ನಿರ್ಮಲ ಸಿ. ಎಲಿಗಾರ, ಶ್ರೀ ಎಸ್.ಎ. ರಾಮದಾಸ್, ಶ್ರೀ ಎಸ್.ಟಿ. ಸೋಮಶೇಖರ್ ಮೊದಲಾದವರಿದ್ದಾರೆ.

## ಆಧುನಿಕ ಶೈಲಿಯಿಂದಾಗಿ ಜೀವನ ಜಂಜಾಟ

### ಜಗದ್ಗುರು ವಚನಾನಂದಶ್ರೀ ಜೀವನಪಾಠ



ಆಧುನಿಕ ಶೈಲಿಯಿಂದಾಗಿ ಜೀವನ ಜಂಜಾಟಕ್ಕೆ ತುತ್ತಾಗಿದೆ ಎಂದು ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳವರು ಆತಂಕ ವ್ಯಕ್ತಪಡಿಸಿದರು.

ಸಾಂಸ್ಕೃತಿಕಮೇಳ ಹಾಗೂ ದನಗಳ ಜಾತ್ರೆ ಸಮಾರೋಪ ಸಮಾರಂಭದಲ್ಲಿ ಸಮ್ಮುಖವಹಿಸಿ ಶುಭಸಂದೇಶ ನೀಡಿದ ಶ್ರೀಗಳು ಒತ್ತಡಕ್ಕೊಳಗಾಗಿರುವ ಮನುಷ್ಯ ಅನೇಕ ರೋಗರುಜಿನಗಳನ್ನು ಬರಮಾಡಿ ಕೊಂಡಿದ್ದಾನೆ. ಪ್ರಾಚೀನ ಕಾಲದಲ್ಲಿ ಯೋಗಿಗಳು ಬೆಟ್ಟ, ಗುಡ್ಡ, ಪರ್ವತ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ನಿಸರ್ಗಕ್ಕೆ ಹತ್ತಿರವಾಗಿ ಬದುಕುತ್ತಿದ್ದ ಅವರು ನೂರಾರು ವರ್ಷ ಆರೋಗ್ಯವಾಗಿರುತ್ತಿದ್ದರು. ನಿಸರ್ಗದಿಂದ ಹಾಗೂ ಪ್ರಾಣಿಗಳಿಂದಲೇ ಯೋಗ ಎಂಬುದು ಹುಟ್ಟಿದೆ. ಮನುಷ್ಯರಾದ ನಾವು ಪ್ರಕೃತಿ ಸಹಜವಾಗಿ ಜೀವಿಸುವ ಪ್ರಾಣಿ-ಪಕ್ಷಿಗಳ ಜೀವನ ಶೈಲಿಯಿಂದ ಸಾಕಷ್ಟು ಕಲಿಯ ಬೇಕಾಗಿದೆ ಎಂದು ನುಡಿದರು.

-ವಿನುವಿರಾಟ್ ಸಿ

## ಗ್ರಾಮೀಣ ಹೆಣ್ಣು ಮಕ್ಕಳ ಆಶಾಕಿರಣ ಶ್ರೀಮಠ



ಕಾಮಗೆರೆಯಲ್ಲಿ ಪೂಜ್ಯ ರಾಜೇಂದ್ರ ಶ್ರೀಗಳವರು ಪ್ರೌಢಶಾಲೆಯನ್ನು ತೆರೆಯಲಾಗಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಪಡೆಯಲು ಸಾಧ್ಯವಾಯಿತು. ಅಲ್ಲಿ ಓದಿರುವ ಹೆಣ್ಣು ಮಕ್ಕಳು ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆಮಾಡಿ ಉನ್ನತ ಸ್ಥಾನದಲ್ಲಿದ್ದಾರೆ ಎಂದು ಮಾಜಿ ಶಾಸಕಿಯಾದ ಶ್ರೀಮತಿ ಪರಿಮಳ ನಾಗಪ್ಪನವರು ನುಡಿದರು. 8ನೇ ಪುಟಕ್ಕೆ

## ಅವರು ಮೊಬೈಲ್; ಇವರು ಸೀರಿಯಲ್!

ಇಂದು ಮಕ್ಕಳ ಆಸಕ್ತಿ ಮೊಬೈಲ್ ಮೇಲೆ, ಮಹಿಳೆಯರ ಆಸಕ್ತಿ ಸೀರಿಯಲ್ ಮೇಲೆ ಎಂಬಂತಾಗಿದೆ. ಮಕ್ಕಳು ಮತ್ತು ಮಹಿಳೆಯ ಓದುವ ಆಸಕ್ತಿ ಕಡಿಮೆಯಾಗುತ್ತಿದೆ. ಎಲ್ಲರೂ ಮೊಬೈಲ್ ಫೋನ್ ಮತ್ತು ಟಿವಿ ಸೀರಿಯಲ್‌ಗಳ ದಾಸರಾಗುತ್ತಿದ್ದಾರೆ ಎಂದು ಶಾಸಕರಾದ ಶ್ರೀ ಎಸ್.ಎ. ರಾಮದಾಸ್ ಹೇಳಿದರು.



ಚಿತ್ರಕಲಾ ಸ್ಪರ್ಧೆ ಉದ್ಘಾಟನೆ ಹಾಗೂ ಭಜನಾ ಮೇಳದಲ್ಲಿ ಮಾತನಾಡಿದ ಅವರು ಭಜನೆ ಎಂದರೆ ವಯಸ್ಸಾದವರಿಗೆ ಮಾತ್ರ ಅಲ್ಲ ಎಲ್ಲರೂ ಭಜನಾ 7ನೇ ಪುಟಕ್ಕೆ





## ಪಂದ್ಯದಲ್ಲಿ ಸೋಲು-ಗೆಲುವು ಸಾಮಾನ್ಯ

ಕುಸ್ತಿ ಪಂದ್ಯಾವಳಿ ಉದ್ಘಾಟನಾ ಸಮಾರಂಭದಲ್ಲಿ ಸಮ್ಮುಖವಹಿಸಿದ್ದ ತುಮಕೂರು ಜಿಲ್ಲೆ, ಬೆಟ್ಟದಹಳ್ಳಿಯ ಶ್ರೀ ಗವಿಮಠದ ನಿ.ಪ್ರ.ಸ್ವ. ಶ್ರೀ ಚಂದ್ರಶೇಖರ ಸ್ವಾಮಿಗಳು ಮಾತನಾಡಿ, ಸುತ್ತೂರು ಜಾತ್ರೆ ಅತ್ಯಂತ ಆಕರ್ಷಣೀಯ ಜಾತ್ರೆಯಾಗಿದೆ. ಇದು ಧಾರ್ಮಿಕ ಸಭೆ, ಸಂಸ್ಕೃತಿ, ಕಲೆ, ಕುಸ್ತಿ, ವಸ್ತು ಪ್ರದರ್ಶನ ಹೀಗೆ ಹತ್ತು ಹಲವು ವಿಚಾರಗಳನ್ನು ಬಿಂಬಿಸುವ ಕೇಂದ್ರವಾಗಿದೆ. ಕುಸ್ತಿ ಪಂದ್ಯಾವಳಿಯು ಬಹಳ ವಿಶೇಷವಾಗಿದ್ದು, ಯಾವುದೇ ಜಾತಿ, ಮತ, ಧರ್ಮಭೇದವಿಲ್ಲದೆ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಇದಕ್ಕೆ ದೈಹಿಕ, ಮಾನಸಿಕ ಸದೃಢತೆ ಇರಬೇಕು. ಕುಸ್ತಿ ಅಖಾಡದಲ್ಲಿ ಆಡುವ ಒಂದು ಸ್ಪರ್ಧೆ. ಭಾರತದ ಮಣ್ಣು ಅತ್ಯಂತ ಶ್ರೇಷ್ಠವಾದದ್ದು, ಸಾಧು-ಸಂತರು, ಮಹಾತ್ಮರು ನಡೆದಾಡಿದ ಪುಣ್ಯ ಭೂಮಿಯಿದು. ಒಮ್ಮೆ ಅಲೆಗ್ಸಾಂಡರ್ ತಮ್ಮ 7ನೇ ಪುಟಕ್ಕೆ

## ಹೊರಟಿದ್ದೆ ನಾನು ನನ್ನೂರ ಜಾತ್ರೆಗೆ

ಜಾತ್ರೆ ಎಂಬ ಕಲ್ಪನೆ ಜನರಲ್ಲಿ ಆಸೆ, ಕನಸು, ಉಮ್ಮಸ್ಸು ಮತ್ತು ಚೈತನ್ಯವನ್ನು ಹುಟ್ಟುಹಾಕುತ್ತದೆ ಎಂದು ಬೆಂಗಳೂರು ಆಕಾಶವಾಣಿಯ ಕಾರ್ಯಕ್ರಮ ಮುಖ್ಯಸ್ಥರಾದ ಶ್ರೀಮತಿ ನಿರ್ಮಲ ಸಿ ಎಲಿಗಾರರವರು ಅಭಿಪ್ರಾಯಪಟ್ಟರು.



ಚಿತ್ರಕಲಾ ಸ್ಪರ್ಧೆ ಉದ್ಘಾಟನೆ ಮತ್ತು ಭಜನಾ ಮೇಳ ಸಮಾರೋಪದಲ್ಲಿ ಮುಖ್ಯ ಅತಿಥಿಗಳಾಗಿದ್ದ ಅವರು "ಹೊರಟಿದ್ದೆ ನಾನು ನನ್ನೂರು ಜಾತ್ರೆಗೆ ಕೈಯಲ್ಲಿ ನಾಕಾಣೆ ಕಾಸೊಂದು 7ನೇ ಪುಟಕ್ಕೆ



ಕುಸ್ತಿ ಪಂದ್ಯಾವಳಿಗೆ ಚಾಲನೆ: ಜಗದ್ಗುರುಗಳವರು, ವಾಟಾಳು ಶ್ರೀಗಳು, ಬೇಬಿಮಠದ ಶ್ರೀಗಳು, ಶ್ರೀ ಜಯರಾಜೇಂದ್ರರು, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ. ಕೆ.ಟಿ. ಶ್ರೀಕಂಠೇಗೌಡ ಮೊದಲಾದವರಿದ್ದಾರೆ.

# ಆಧ್ಯಾತ್ಮ ಚಿಂತನೆ ಮೋಕ್ಷ ಸಾಧನೆ

## ಶ್ರೀ ಸದ್ಗುರು ಬೋಧಿನಾಥ ವೇಲಾಯನ ಸ್ವಾಮಿಗಳು



ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಚಿತ್ರಕಲಾ ಸ್ಪರ್ಧೆ ಉದ್ಘಾಟನೆ ಮತ್ತು ಭಜನಾ ಮೇಳ ಸಮಾರೋಪ ಸಮಾರಂಭದ ದಿವ್ಯಸಮ್ಮುಖ ವಹಿಸಿ ಮಾತನಾಡಿದ ಅಮೇರಿಕಾದ ಹವಾಯಿ ಹಿಂದೂ ಮೊನ್ಯಾಸ್ಟೆರಿಯ **ಶ್ರೀ ಸದ್ಗುರು ಬೋಧಿನಾಥ ವೇಲಾಯನ ಸ್ವಾಮಿಗಳು** ಪ್ರತಿನಿತ್ಯ ಪ್ರಾರ್ಥನೆ, ಪೂಜೆ, ಧ್ಯಾನದಂತಹ ಆಧ್ಯಾತ್ಮಿಕ ಚಿಂತನೆಯ ತರಬೇತಿ ಇಂದಿನ ಮಕ್ಕಳಿಗೆ ಅತ್ಯವಶ್ಯಕ. ಮನುಷ್ಯ ಶಾರೀರಿಕ ದೃಢಕಾಯನಾಗಲು ಮತ್ತು ಮಾನಸಿಕವಾಗಿ ಸ್ಥೈರ್ಯವಂತನಾಗಲು ಯೋಗ ಮತ್ತು ಆಧ್ಯಾತ್ಮಿಕ ಜ್ಞಾನ ಬಹಳ ಮುಖ್ಯವಾಗಿದೆ. ಶಾರೀರಿಕ ಶಕ್ತಿಗಾಗಿ ದೇಹವನ್ನು ದಂಡಿಸುವಂತೆ, ಮಾನಸಿಕ ಶಕ್ತಿಗಾಗಿ ಆಧ್ಯಾತ್ಮಿಕ ಮತ್ತು ತಾತ್ವಿಕ ಅಧ್ಯಯನ ಅಗತ್ಯ.

ಮಾನವ ಸಹನೆ, ಪ್ರೀತಿ ಪರಸ್ಪರ ಹೊಂದಾಣಿಕೆಯಿಂದ ಬಾಳುವುದನ್ನು ರೂಢಿಸಿಕೊಳ್ಳಬೇಕು. ನಮ್ಮನ್ನು ನಾವು ಅರಿಯುವುದೇ ನಿಜವಾದ ಧರ್ಮ, ಭಗವಂತನ ಸ್ಮರಣೆಯಿಂದ ಮೋಕ್ಷ ಪ್ರಾಪ್ತಿಯಾಗುತ್ತದೆ. ಮಂತ್ರ, ಪ್ರಾರ್ಥನೆ, ಓಂಕಾರ, ಜಪ ಹಾಗೂ ಆಧ್ಯಾತ್ಮಿಕ ವಿಚಾರಗಳನ್ನು ಮಂಥನ ಮಾಡುವುದರಿಂದ ಆತ್ಮಾಭಿವೃದ್ಧಿಯಾಗುತ್ತದೆ ಎಂದು ಶುಭ ಹಾರೈಸಿದರು. –ಕೃಷ್ಣ ಮಾಧುರಿ



ಪ್ರಸಾದ ವಿತರಣೆಗೆ ಸಿದ್ದಪಡಿಸುತ್ತಿರುವ ಕಾಯಕ ಬಂಧುಗಳು

## ಸುತ್ತೂರು ಜಾತ್ರೆ ಮೈಸೂರಿನ ದಸರಾ ಹಬ್ಬದಷ್ಟೇ ಮಹತ್ವದ್ದು



ಸಾಂಸ್ಕೃತಿಕಮೇಳ ಹಾಗೂ ದನಗಳ ಜಾತ್ರೆ ಸಮಾರೋಪದಲ್ಲಿ ಅತಿಥಿಗಳಾಗಿದ್ದ ಶ್ರೀ ಹೆಚ್.ಎಸ್. ನಂಜಪ್ಪನವರು ಮಾತನಾಡುತ್ತಾ, ದನಗಳ ಜಾತ್ರೆಯಲ್ಲಿ ಉತ್ತಮವಾದ ಹೋರಿಗಳನ್ನು ನೋಡಬಹುದು. ಬೇರೆ ಬೇರೆ ಭಾಗಗಳಿಂದ ಆಗಮಿಸಿರುವ ರೈತರಿಗೆ ಉತ್ತಮ ರಾಸುಗಳನ್ನು ಕೊಂಡುಕೊಳ್ಳಲು ಇಲ್ಲಿ ಅನುಕೂಲವಿದೆ. ಕೃಷಿಮೇಳದಲ್ಲಿ ರೈತರಿಗೆ ಬೇಕಾದ ಉಪಯುಕ್ತ ಮಾಹಿತಿಗಳು ದೊರಕುತ್ತವೆ. ಇದರ ಪ್ರಯೋಜನವನ್ನು ನಮ್ಮ ರೈತರು ಪಡೆದು ಕೊಳ್ಳುತ್ತಿದ್ದಾರೆ. ಶ್ರೀಮಠದ ಕಾರ್ಯವನ್ನು ಎಷ್ಟು ಹೊಗಳಿದರೂ ಸಾಲದು. ಈ ಜಾತ್ರೆಯು ಮೈಸೂರಿನ ದಸರಾ ಹಬ್ಬದಷ್ಟೇ ಮಹತ್ವದ್ದು ಎಂದರು. –ಅನನ್ಯ ಜಿ ಎಸ್, ಕೃಷ್ಣ ಮಾಧುರಿ

# ರಾಸುಗಳಿಗೆ ಸುಮಾನ : ಮಾಲೀಕರಿಗೆ ಬಹುಮಾನ

ಹಾಲುಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ ಟಿ. ನರಸೀಪುರ ತಾಲ್ಲೂಕು ಕಾವೇರಿಪುರದ ಶ್ರೀ ಕೆ.ಎಸ್. ಮಹೇಶ್‌ರವರು ತಮ್ಮ ಮುದ್ದಾದ ಹಾಲುಹಲ್ಲಿನ ಜೋಡಿ ರಾಸುಗಳ ತುಂಟ ಪ್ರದರ್ಶನದಿಂದ ಪ್ರಥಮ ಬಹುಮಾನ ಗಳಿಸಿದರೆ, ಶ್ರೀರಂಗಪಟ್ಟಣ ತಾಲ್ಲೂಕು, ಗಂಜಾಂನ ಶ್ರೀ ಶಿವರಾಮುರವರ ಚುರುಕಾದ ರಾಸುಗಳು ದ್ವಿತೀಯ ಬಹುಮಾನ ಪಡೆದರೆ, ತೃತೀಯ ಬಹುಮಾನವನ್ನು ಶ್ರೀರಂಗಪಟ್ಟಣ ತಾಲ್ಲೂಕು, ನೇರಳೆಕೆರೆಯ ಶ್ರೀ ಎನ್.ಎನ್. ಪಟೇಲ್ ಪುಟ್ಟಸ್ವಾಮಿಗೌಡರವರು ರಾಸುಗಳು ಪಡೆಯುವಲ್ಲಿ ಯಶಸ್ವಿಯಾದವು.

ಎರಡುಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ ನಂಜನಗೂಡು ತಾಲ್ಲೂಕು ದೇವರಸನಹಳ್ಳಿಯ ಶ್ರೀ ಮಹದೇವಪ್ರಸಾದ್‌ರವರ ಜೋಡಿ ರಾಸುಗಳು ತಮ್ಮ ಜೋಡಿಹಲ್ಲುಗಳನ್ನು ಪ್ರದರ್ಶಿಸಿ ಪ್ರಥಮ ಬಹುಮಾನವನ್ನು ಪಡೆದರೆ, ಹುಣಸೂರು ತಾಲ್ಲೂಕು, ಬಿಳಿಕೆರೆಯ ಶ್ರೀ ನಾಗರಾಜುರವರು ಜೋಡಿ ರಾಸುಗಳು ಹುಲ್ಲು ಮೇಯುತ್ತ ಪ್ರದರ್ಶಿಸಿದ ಹಲ್ಲಿಗೆ ಮನಸೋತು ದ್ವಿತೀಯ ಬಹುಮಾನವನ್ನು ಪಡೆದುಕೊಂಡಿತು. ಪಾಂಡವಪುರ ತಾಲ್ಲೂಕು ದೊಡ್ಡಬ್ಯಾಡರಹಳ್ಳಿಯ ಶ್ರೀ ಡಿ.ಟಿ.ಧರ್ಮರವರ ಜೋಡಿ ರಾಸುಗಳು ಮಾಡಿದ ಮೋಡಿಯಿಂದ ತೃತೀಯ ಬಹುಮಾನವನ್ನು ಪಡೆದವು.



ಹೋರಿಯೊಂದಿಗೆ ಫೋಸ್ ಕೊಟ್ಟ ಪೊಲೀಸ್ ಅಧಿಕಾರಿ

ನಾಲ್ಕು ಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ ಮಂಡ್ಯದ ಶ್ರೀ ಕೆ.ಎಂ. ತ್ರಿಶಂಕರ್ ಉರುಫ್ ಸೋಮಣ್ಣರವರ ರಾಸುಗಳ ಅಂದಚಂದದಿಂದ ಪ್ರಥಮ ಬಹುಮಾನ ಗಳಿಸಿದರೆ, ಪಾಂಡವಪುರ ತಾಲ್ಲೂಕಿನ ದೊಡ್ಡಬ್ಯಾಡರಹಳ್ಳಿಯ ಶ್ರೀ ಡಿ.ಟಿ. ಧರ್ಮರವರ ರಾಸುಗಳು ದ್ವಿತೀಯ ಬಹುಮಾನವನ್ನು ಜಿಗಿದು ಪಡೆದವು. ಮೂರನೇ ಬಹುಮಾನವನ್ನು ಶ್ರೀರಂಗಪಟ್ಟಣ ತಾಲ್ಲೂಕು, ಚಿಕ್ಕಪಾಳ್ಯದ ಶ್ರೀ ಶಿವನಂಜೇಗೌಡರವರ ರಾಸುಗಳು ಗಳಿಸಿದವು.

ಆರುಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಗಂಜಾಂನ ಶ್ರೀ ಶಿವಕುಮಾರ್‌ರವರ ಮನಮೋಹಕವಾದ ರಾಸುಗಳು ಪ್ರಥಮ ಬಹುಮಾನವನ್ನು ಗಳಿಸುವಲ್ಲಿ ಯಶಸ್ವಿಯಾದರೆ, ಮಂಡ್ಯ ತಾಲ್ಲೂಕು ಕೋಣನಹಳ್ಳಿಯ ಶ್ರೀ ವೀರೇಗೌಡರವರ ರಾಸುಗಳು ತಮ್ಮ ಘನಗಾಂಭೀರ್ಯದಿಂದ ದ್ವಿತೀಯ ಬಹುಮಾನವನ್ನು ಸ್ವೀಕರಿಸಿದವು. ಮೂರನೇ ಬಹುಮಾನವನ್ನು ನಂಜನಗೂಡು ತಾಲ್ಲೂಕು, ಜೀಮಾರಹಳ್ಳಿಯ ಶ್ರೀ ಮಲ್ಲಣ್ಣರವರ ರಾಸುಗಳು ಪಡೆಯುವಲ್ಲಿ ಯಶಸ್ವಿಯಾದವು.

ಮೊಳೆಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ ಟಿ.ಎನ್.ಪುರ ತಾಲ್ಲೂಕು, ನುಗ್ಗಹಳ್ಳಿಕೊಪ್ಪಲಿನ ಶ್ರೀ ಎನ್.ಆರ್. ರಾಜೇಶ್‌ರವರ ಜೋಡಿ ರಾಸುಗಳು ಗತ್ತಿನಿಂದ ಹೆಜ್ಜೆ ಹಾಕುತ್ತಾ ಪ್ರಥಮ ಬಹುಮಾನವನ್ನು ಪಡದರೆ, ನಂಜನಗೂಡು ತಾಲ್ಲೂಕು ಕಬ್ಬಳಗೆರೆಹುಂಡಿಯ ಶ್ರೀ ನಾರಾಯಣಗೌಡರವರ ರಾಸುಗಳು ಒಡೆಯನ ಜೊತೆ ಅತ್ಮೀಯತೆಯಿಂದ ಇರುವ ಮೂಲಕ ದ್ವಿತೀಯ ಬಹುಮಾನವನ್ನು ಗಳಿಸಿದವು. ನಂಜನಗೂಡು ತಾಲ್ಲೂಕು, ಕುಂಬಳ್ಳಿ (ಶಂಕರಪುರ)ಯ ಶ್ರೀ ಸ್ವಾಮಿರವರ ಜೋಡಿ ರಾಸುಗಳು ಮೂರನೇ ಬಹುಮಾನವನ್ನು ಪಡೆದುಕೊಂಡವು.



ಬಾಯಿಗೂಡಿದ ಹಲ್ಲಿನ ಜೋಡಿ ರಾಸುಗಳ ವಿಭಾಗದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಬೆಟ್ಟಳ್ಳಿಯ ಶ್ರೀ ದೇವರಾಜುರವರ ಜೋಡಿ ರಾಸುಗಳು ತಮ್ಮ ಮುಗ್ಧತೆಯ ಫಲವಾಗಿ ಪ್ರಥಮ ಬಹುಮಾನವನ್ನು ಬಾಚುವಲ್ಲಿ ಯಶಸ್ವಿಯಾದರೆ, ಬನ್ನೂರಿನ ಡಾ. ರಾಹುಲ್‌ಗೌಡರವರ ಜೋಡಿ ರಾಸುಗಳು ದ್ವಿತೀಯ ಬಹುಮಾನವನ್ನು ಗಳಿಸಿದವು. ತೃತೀಯ ಬಹುಮಾನಕ್ಕೆ ಮಳವಳ್ಳಿಯ ಶ್ರೀ ನಾಗರಾಜುರವರ ರಾಸುಗಳು ಭಾಜನವಾದವು.

ಉಳುವ ಜೋಡಿ ಹಸುಗಳ ವಿಭಾಗದಲ್ಲಿ ಟಿ.ಎನ್. ಪುರ ತಾಲ್ಲೂಕು ಎಂ.ಎಲ್. ಹುಂಡಿಯ ಶ್ರೀ ಪರಶಿವಮೂರ್ತಿರವರ ಜೋಡಿ ಹಸುಗಳು ಉಳುವ ಯೋಗಿಯ ನೋಡಿಲ್ಲಿ ಎನ್ನುತ್ತಾ ಪ್ರಥಮ ಬಹುಮಾನವನ್ನು ಗೆದ್ದರೆ, ಬನ್ನೂರು ಟೌನ್‌ನ ಶ್ರೀ ರವಿರವರ ಜೋಡಿ ಹಸುಗಳು ನಾವು ಎಲ್ಲದಕ್ಕೂ ಸೈ ಎನ್ನುತ್ತಾ ದ್ವಿತೀಯ ಬಹುಮಾನವನ್ನು ಪಡೆಯಿತು. ತೃತೀಯ ಬಹುಮಾನವನ್ನು ಮಳವಳ್ಳಿ ತಾಲ್ಲೂಕು ರಾಗಿಬೊಮ್ಮನಹಳ್ಳಿಯ ಶ್ರೀ ರಜಿನಿಕಾಂತರವರ ಜೋಡಿ ಹಸುಗಳು ಕಾಮಧೇನು ನಾನು ಎಲ್ಲವನ್ನು ನೀಡುವೆನು ಎನ್ನುತ್ತಾ ಬಹುಮಾನ ಸ್ವೀಕರಿಸಿದವು. ಸಮಾಧಾನಕರ ಬಹುಮಾನಗಳನ್ನು ಮಳವಳ್ಳಿ ತಾಲ್ಲೂಕು, ರಾಗಿಬೊಮ್ಮನಹಳ್ಳಿಯ ಶ್ರೀ ಆರ್.ಬಿ. ಮಂಜುನಾಥ್‌ರವರ ಹಸುಗಳು, ಮಳವಳ್ಳಿಯ ಶ್ರೀ ರಾಜುಗೌಡರವರ ಹಸುಗಳು, ನಂಜನಗೂಡು ತಾಲ್ಲೂಕು ಅಳಗಂಚಿಯ ಶ್ರೀ ಚಿಕ್ಕಲಿಂಗೇಗೌಡರವರ ಹಸುಗಳು ಪಡೆದವು.

ಮಳವಳ್ಳಿಯ ಶ್ರೀ ಬೋರೇಗೌಡ, ಮೈಸೂರಿನ ಶ್ರೀ ಸೈಯದ್ ಮುನೀರ್, ಸುತ್ತೂರಿನ ಶ್ರೀ ರಘು, ಗುಂಡ್ಲುಪೇಟೆ ತಾಲ್ಲೂಕು ಪಡಗೂರಿನ ಶ್ರೀ ಪ್ರಮೀತ್‌ಕುಮಾರ್, ಮೈಸೂರು ತಾಲ್ಲೂಕು ಮೊಸಬಾಯನಹಳ್ಳಿಯ ಶ್ರೀ ಕಳಸರಾಜು ಮತ್ತು ಮೈಸೂರು ತಾಲ್ಲೂಕು ಹಂಚ್ಯಾ ಗ್ರಾಮದ ಶ್ರೀ ಶಂಕರಪ್ಪನವರುಗಳ ಮಿಶ್ರತಳಿ ಹೋರಿಗಳು ಜಾತ್ರೆಯಲ್ಲಿ ಯುವಕರನ್ನೇ ನಾಚಿಸುವಂತೆ ಸಿಂಗಾರಗೊಂಡು ವಿಶೇಷ ಸಮಾಧಾನಕರ ಬಹುಮಾನಗಳನ್ನು ಪಡೆಯುತ್ತಾ ಎಲ್ಲರ ಗಮನಸೆಳೆದವು.

# ದಾರಿ ತೋರಿದ ಗುರುವಿಗೆ ನಮೋ...



ಚಿತ್ರಕಲಾಸ್ಪರ್ಧೆ ಉದ್ಘಾಟನೆ ಮತ್ತು ಭಜನಾ ಮೇಳ ಸಮಾರೋಪದ ಸಮ್ಮುಖ ವಹಿಸಿದ್ದ **ಷ.ಬ್ರ.ಡಾ. ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು** ಶುಭಸಂದೇಶವನ್ನು ನೀಡಿದರು. ಸುತ್ತೂರು ಜಾತ್ರೆಯು ದಕ್ಷಿಣ ಕರ್ನಾಟಕದಲ್ಲಿ ಅತಿ ದೊಡ್ಡ ಜಾತ್ರೆಯಾಗಿದ್ದು, ಈ ಜಾತ್ರೆಗೆ ಭಕ್ತರು, ಸಾರ್ವಜನಿಕರು, ರಾಜಕೀಯದವರು ಮತ್ತು ತಜ್ಞರು ಸೇರಿದಂತೆ ಎಲ್ಲರನ್ನು ಸುತ್ತೂರು ಶ್ರೀಗಳು ಆಹ್ವಾನಿಸಿದ್ದಾರೆ. ಹಿಂದೆ ನಾವು ಸುತ್ತೂರು ಶ್ರೀಮಠದಲ್ಲೇ ಬೆಳೆದು ಈಗ ಮಹಾರಾಷ್ಟ್ರದ ಆಶ್ರಮದಲ್ಲಿ ಗುರುಗಳಾಗಿದ್ದೇವೆ. ಆದ್ದರಿಂದ ಇಲ್ಲಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ನನಗೆ ಒಂದು ಸುವರ್ಣ ದಿವಸ ಎಂದರು. ಶ್ರೀಮಠದ ತತ್ವವನ್ನು ತಿಳಿದಿರುವ ನಾವು ನಮ್ಮ ಆಶ್ರಮದಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡುತ್ತಿದ್ದೇವೆ ಎಂದು ಹೇಳಿದರು. – **ದೀಪಶ್ರೀ ಕೆ.ಪಿ.**

## ಊರೂರುಗಳಿಂದ ಬಂದರು... ಚಿತ್ರ ಬಿಡಿಸಿದ ಚಿಣ್ಣರು...



# ಜೆಎಸ್‌ಎಸ್ ನಾಡಿನ ಹೆಮ್ಮೆ



ಸರ್ವರಿಗೂ ಆಶೀರ್ವದಿಸುವ ಶ್ರೀಮಠ ಹಾಗೂ ಘನತೆ, ಗೌರವ, ಹೃದಯ ವೈಶಾಲ್ಯತೆಯನ್ನು ಹೊಂದಿರುವ ಶ್ರೀಗಳವರು ದೊರಕಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ಶಾಸಕರು, ಮಾಜಿ ಸಚಿವರು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರಾದ **ಶ್ರೀ ಈಶ್ವರ್ ಬಿ ಖಂಡ್ರೆರವರು** ತಿಳಿಸಿದರು.

ಚಿತ್ರಕಲಾಸ್ಪರ್ಧೆ ಉದ್ಘಾಟನೆ ಹಾಗೂ ಭಜನಾ ಮೇಳ ಸಮಾರೋಪ ಸಮಾರಂಭದಲ್ಲಿ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಶಿಕ್ಷಣದ ಜೊತೆ ಉದ್ಯೋಗವನ್ನು ಒದಗಿಸುತ್ತಿರುವ ಶ್ರೀಮಠವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿರುವುದು ಮಠದ ಹೆಮ್ಮೆ, ಅಷ್ಟೆ ಅಲ್ಲದೆ ದೇಶದ ಕೀರ್ತಿಯನ್ನು ಹೆಚ್ಚಿಸುತ್ತಿದೆ.

ಜಾತ್ರಾ ಮಹೋತ್ಸವದಲ್ಲಿ ಜ್ಞಾನವನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳು ನಡೆಯುತ್ತಿದ್ದು ಯುವಕರು, ರೈತಬಾಂಧವರು ಇದರ ಸದುಪಯೋಗ ಪಡೆದುಕೊಂಡು ಮೌಲ್ಯಯುತವಾದ ಜೀವನವನ್ನು ನಡೆಸುವಂತಾಗಲಿ ಎಂದು ಹೇಳಿದರು. **–ಅನುಷ ಪಿ.**

## ಜಾತ್ರಾ ಮಹೋತ್ಸವ

### ಶ್ರೀ ಕ್ಷೇತ್ರದಲ್ಲಿಂದು

**71ನೇ ಗಣರಾಜ್ಯೋತ್ಸವ** **ಬೆಳಗ್ಗೆ 8.00**

**ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು**

**ಸಮ್ಮುಖ** : ಶ್ರೀ ಶ್ರೀ ಚನ್ನಬಸವ ಸ್ವಾಮಿಗಳು, ಶ್ರೀ ಗುರು ಕಂಬಳೀಶ್ವರ ಮಠ, ಮಲ್ಲನಮೂಲೆ ಸುಕ್ಷೇತ್ರ, ಶ್ರೀ ಶ್ರೀ ಮಹಾಂತ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠ, ದೇವನೂರು. **ಅಧ್ಯಕ್ಷತೆ :** ಶ್ರೀಮತಿ ಬಿ.ಸಿ. ಪರಿಮಳಾ ಶ್ಯಾಮ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಮೈಸೂರು. **ಧ್ವಜಾರೋಹಣ :** ಶ್ರೀ ಬಿ.ಜೆ. ಪುಟ್ಟಸ್ವಾಮಿ, ಉಪಾಧ್ಯಕ್ಷರು, ರಾಜ್ಯ ಯೋಜನಾ ಆಯೋಗ. **ಮುಖ್ಯ ಅತಿಥಿಗಳು :** ಶ್ರೀಮತಿ ಗೌರಮ್ಮ ಸೋಮಶೇಖರ್, ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ಮೈಸೂರು, ಶ್ರೀ ಎನ್. ಸಿದ್ದೇಗೌಡ, ಅಧ್ಯಕ್ಷರು, ಜಿಲ್ಲಾ ಹಾಲು ಒಕ್ಕೂಟ, ಮೈಸೂರು, ಶ್ರೀ ಬಿ.ಎಲ್. ಪಾಟೀಲ್, ಅಧ್ಯಕ್ಷರು, ವಿಮೋಚನಾ ಸಂಘ, ಅಥಣಿ, ಶ್ರೀ ಎಸ್.ವಿ. ಬಾಲಸುಬ್ರಹ್ಮಣ್ಯಂ, ಸಿಎಂಡಿ, ಬನ್ನಾರಿ ಶುಗರ್ಸ್ ಲಿ., ಶ್ರೀ ಹೆಚ್.ಎಸ್. ಸೋಮಶೇಖರ್, ಉದ್ಯಮಿಗಳು, ಬೆಂಗಳೂರು, ಶ್ರೀ ಮೂಲ್‌ಚಂದ್ ನಹರ್, ಉದ್ಯಮಿಗಳು, ಬೆಂಗಳೂರು, ಶ್ರೀ ಜೆ.ಆರ್. ಪಾಟೀಲ್, ಸಮಾಜ ಸೇವಕರು, ಧಾನವಾಡ, ಮಹಾರಾಷ್ಟ್ರ, ಡಾ.ಎಸ್. ಶಿವರುದ್ರಸ್ವಾಮಿ, ಗೌಡರ ಮುದ್ದುವೀರಪ್ಪ ಸ್ಮಾರಕ ಆಸ್ಪತ್ರೆ, ಕೊಳ್ಳೇಗಾಲ, ಶ್ರೀ ಶಿವಕುಮಾರ್, ಮಾಲೀಕರು, ಮಹಾಲಕ್ಷ್ಮೀ ಸ್ವೀಟ್ಸ್, ಶ್ರೀ ಪಿ. ನಿರಂಜನ್, ಉದ್ಯಮಿಗಳು, ಬೆಂಗಳೂರು.

**ಕೃಷಿ ಮೇಳ ಮತ್ತು ವಸ್ತುಪ್ರದರ್ಶನ : ಸಮಾರೋಪ** **ಬೆಳಗ್ಗೆ 10.30**

**ಸಮ್ಮುಖ** : ನಿ.ಪ್ರ.ಸ್ವ. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠ, ತುಮಕೂರು, ಜಗದ್ಗುರು ಡಾ. ಶ್ರೀ ನಿರ್ಮಲಾ ನಂದನಾಥ ಮಹಾಸ್ವಾಮಿಗಳು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ. **ಸಮಾರೋಪ ಭಾಷಣ** : ಶ್ರೀ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು. **ಅಧ್ಯಕ್ಷತೆ** : ಶ್ರೀ ವಿ. ಸೋಮಣ್ಣ, ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು. **ಬಹುಮಾನ ವಿತರಣೆ** : ಕೃಷಿ ಮೇಳ : ಶ್ರೀ ವಿ. ಶ್ರೀನಿವಾಸಪ್ರಸಾದ್, ಸಂಸದರು, ಮಾಜಿ ಸಚಿವರು. **ಶೈಕ್ಷಣಿಕ ಮತ್ತು ವಿಜ್ಞಾನ** : ಡಾ. ಕೆ. ಸುಧಾಕರ್, ವಿಧಾನಸಭಾ ಸದಸ್ಯರು, ಚಿಕ್ಕಬಳ್ಳಾಪುರ. **ವಸ್ತುಪ್ರದರ್ಶನ** : ಡಾ. ಯತೀಂದ್ರ ಸಿದ್ಧರಾಮಯ್ಯ, ವಿಧಾನಸಭಾ ಸದಸ್ಯರು, ವರುಣ. **ಮುಖ್ಯ ಅತಿಥಿಗಳು** : ಶ್ರೀ ಜಿ.ಟಿ. ದೇವೇಗೌಡ, ಶಾಸಕರು, ಮಾಜಿ ಸಚಿವರು, ಡಾ. ಕೆ. ಅನ್ನದಾನಿ, ವಿಧಾನಸಭಾ ಸದಸ್ಯರು, ಮಳವಳ್ಳಿ, ಶ್ರೀ ಎನ್. ಚಲುವರಾಯಸ್ವಾಮಿ, ಮಾಜಿ ಸಚಿವರು, ಮಾಜಿ ಸಚಿವರು, ಶ್ರೀ ಪ್ರಭುಲಿಂಗ್ ಕೆ. ನಾವದಗಿ, ಅಡ್ವೋಕೇಟ್ ಜನರಲ್, ಶ್ರೀ ತುಮಕೂರು ದಯಾನಂದ, ಅಧ್ಯಕ್ಷರು, ಅಕ್ಕ ಸಮ್ಮೇಳನ–2020, ಶ್ರೀ ಅಮರನಾಥ ಗೌಡ, ಅಧ್ಯಕ್ಷರು, ಅಕ್ಕ ವಿಶ್ವಸ್ತ ಮಂಡಳಿ, ಶ್ರೀ ಶಿವಮೂರ್ತಿ ಕೀಲಾರ, ಉದ್ಯಮಿಗಳು, ಅಮೆರಿಕ.

# ಸುತ್ತೂರು ಧರ್ಮ ಸಿಂಚನಕ್ಕೆ ಸಾಕ್ಷಿಯಾದ ತಾಯೂರು

ಜಾತ್ರಾ ಮಹೋತ್ಸವದ ಅಂಗವಾಗಿ ತಾಯೂರು ಗ್ರಾಮದಲ್ಲಿ ಶನಿವಾರ ಮುಂಜಾನೆ ಸ್ನೇಹ, ಸೌಹಾರ್ದ, ಶಾಂತಿ ಪ್ರಾರ್ಥನಾ ಪಥಸಂಚಲನವನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರ ಉತ್ಸವಮೂರ್ತಿಗೆ ಭಕ್ತಾದಿಗಳು ಪೂಜೆ ಸಲ್ಲಿಸಿ ವಾದ್ಯಮೇಳ, ಬ್ಯಾಂಡ್‌ಸೆಟ್, ಭಜನೆ ಮತ್ತು ಶಾಲಾ ವಿದ್ಯಾರ್ಥಿಗಳ ಪಥಸಂಚಲನದೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.



ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸುತ್ತಿರುವ ಶ್ರೀ ಶಂಕರ ಸ್ವಾಮಿಗಳು, ಶ್ರೀ ಸಿದ್ಧೇಶ್ವರ ಸ್ವಾಮಿಗಳು ಹಾಗೂ ಹರಗುರುಚರಮೂರ್ತಿಗಳು

ಮೈಸೂರಿನ ಶ್ರೀ ಬಸವೇಶ್ವರ ಮಠದ ಷ.ಬ್ರ.ಶ್ರೀ ಶಂಕರ ಸ್ವಾಮಿಗಳವರು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿ, ತಾಯೂರು ಗ್ರಾಮವು ಶ್ರೀ ಗುರುಮಲ್ಲೇಶ್ವರರಿಗೆ ಪ್ರಿಯವಾದ ಗ್ರಾಮ. ಇಂತಹ ಪುಣ್ಯ ಭೂಮಿಯಲ್ಲಿ ಧ್ವಜಾರೋಹಣವನ್ನು ನೆರವೇರಿಸಿ, ಧರ್ಮಸಂದೇಶವನ್ನು ಸಾರುತ್ತಿರುವುದು ಅರ್ಥಪೂರ್ಣವಾಗಿದೆ ಎಂದು ಹೇಳಿದರು.

ಕೆ.ಆರ್. ನಗರ ತಾಲ್ಲೂಕಿನ ಅರಕೆರೆ ಗ್ರಾಮದ ಶ್ರೀ ವಿರಕ್ತಮಠದ ನಿ.ಪ್ರ.ಸ್ವ. ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಧರ್ಮಸಂದೇಶ ನೀಡುತ್ತಾ, "ಧರ್ಮೋ ರಕ್ಷತಿ ರಕ್ಷಿತಃ" ಅಂದರೆ ಧರ್ಮವನ್ನು ನಾವು ಕಾಪಾಡಿದರೆ ಅದು ನಮ್ಮನ್ನು ಕಾಪಾಡುತ್ತದೆ. ಧರ್ಮದ ಮೂಲ ಉದ್ದೇಶ ಪ್ರಪಂಚದಲ್ಲಿರುವ ಸಕಲ ಪ್ರಾಣಿಗಳನ್ನು ದಯೆ, ಪ್ರೀತಿ, ಕರುಣೆಯಿಂದ ಕಾಪಾಡಬೇಕು. ಮೇಲು ಕೀಳು ಎಂಬ ಭಾವನೆಯನ್ನು ತೊರೆದು ಸಹೋದರ ಮನೋಭಾವವನ್ನು ಬೆಳೆಸಿಕೊಂಡು ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸಲು ಗುರುಹಿರಿಯರ ಮಾರ್ಗದರ್ಶನ ತುಂಬ ಅವಶ್ಯಕ. ಆ ಕೆಲಸವನ್ನು ಇಂತಹ ಧರ್ಮ ಸಂದೇಶಗಳ ಮೂಲಕ ಸುತ್ತೂರು ಪರಮಪೂಜ್ಯರು ಮಾಡುತ್ತಿರುವುದು ತುಂಬ ಸಂತೋಷವಾಗಿದೆ. ಪೂಜ್ಯರ ಪಾದಸ್ಪರ್ಶದಿಂದ ಈ ಗ್ರಾಮ ಪುಣ್ಯ ಭೂಮಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. – **ಹರ್ಷಿತ ಎಂ. ಚೈತ್ರ ಎಂ.**

## ಜಾತ್ರಾ ಮಹೋತ್ಸವ

### ಪೂಜೆ – ಉತ್ಸವ

**26 ಜನವರಿ 2020 ಭಾನುವಾರ**

**ಪ್ರಾತಃಕಾಲ 4.00** : ಕರ್ತೃಗದ್ದುಗೆ : ಮಹಾರುದ್ರಾಭಿಷೇಕ

**ಬೆಳಗ್ಗೆ 6.30** : ನಂದಿಗುಂದಪುರ : ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ

**ಬೆಳಗ್ಗೆ 7.30** : ಷಟ್‌ಸ್ಥಲ ಧ್ವಜಾರೋಹಣ : ಷ.ಬ್ರ.ಶ್ರೀ ಶಿವಕುಮಾರ ಸ್ವಾಮಿಗಳು, ಶ್ರೀ ಪಟ್ಟದಮಠ, ನೆಲ್ಲಿಗೆರೆ ಮಳವಳ್ಳಿ ತಾ.

**ಧರ್ಮಸಂದೇಶ** : ಷ.ಬ್ರ.ಶ್ರೀ ವರರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗಚ್ಚಿನಮಠ, ಮಸ್ಕಿ, ರಾಯಚೂರು ಜಿಲ್ಲೆ

**ಬೆಳಗ್ಗೆ 10.30** : ಆದಿಜಗದ್ಗುರುಗಳವರ ಉತ್ಸವಮೂರ್ತಿಗೆ ಮಹಾರುದ್ರಾಭಿಷೇಕ (ಕಪಿಲಾನದಿ ತೀರ) ಅಷ್ಟೋತ್ತರ ಶತಕುಂಭೋತ್ಸವ ಪಂಚಾಮೃತಾಭಿಷೇಕ

**ಮಧ್ಯಾಹ್ನ 11.45**: ಕರ್ತೃಗದ್ದುಗೆ : ಅನ್ನಬ್ರಹ್ಮೋತ್ಸವ

**ಮಧ್ಯಾಹ್ನ 12.00**: ಮಹಾಮಂಗಳಾರತಿ

**ಸಂಜೆ 6.30** : ಉತ್ಸವಮೂರ್ತಿಯನ್ನು ಶ್ರೀಮಠಕ್ಕೆ ಬಿಜಯಂಗೈಸುವುದು

# ಅಂದು 11 ರೂ.... ಇಂದು 7 ಕೋಟಿ!

## ಹಿರಿಯ ವಿದ್ಯಾರ್ಥಿಗಳ ಸಾಧನೆ ಬಿಚ್ಚಿಟ್ಟ ಶ್ರೀ ಎಲ್. ರೇವಣ್ಣಸಿದ್ದಯ್ಯ




ಸುತ್ತೂರು ಶ್ರೀಮಠದ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಮಾವೇಶವು ಸುತ್ತೂರು ಶಾಲಾ ಆವರಣದಲ್ಲಿರುವ ಅಲ್ಲಮ ಪ್ರಭು ಸಭಾಂಗಣದಲ್ಲಿ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ನಿವೃತ್ತ ಪೊಲೀಸ್ ಮಹಾನಿರ್ದೇಶಕರು ಹಾಗೂ ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಶ್ರೀ ಎಲ್. ರೇವಣ್ಣ ಸಿದ್ಧಯ್ಯ ಅವರು ಮಾತನಾಡುತ್ತಾ ಪೂಜ್ಯ ರಾಜೇಂದ್ರ ಶ್ರೀಗಳು ಮಕ್ಕಳಲ್ಲಿ ಅಪಾರವಾದ ಪ್ರೀತಿ, ವಾತ್ಸಲ್ಯ, ಅನುಕಂಪ ಹೊಂದಿದ್ದರು. ಆದ್ದರಿಂದಲೇ ಬಡ ಮಕ್ಕಳಿಗಾಗಿ, ಅಕ್ಷರದಿಂದ ವಂಚಿತರಾದ ವಿದ್ಯಾರ್ಥಿಗಳಿಗಾಗಿ 1943–44ರಲ್ಲಿ ಉಚಿತ ಪ್ರಸಾದ ನಿಲಯವನ್ನು ತೆರೆಯುವುದರ ಮೂಲಕ ಅನಾಥ ಮಕ್ಕಳಿಗೆ ಆಶ್ರಯದಾತರಾದರು. ಶ್ರೀಗಳ ಅಭಿಲಾಷೆಯಂತೆ ಅಂದು ಈ "ಹಿರಿಯ ವಿದ್ಯಾರ್ಥಿಗಳ ಸಂಘ" ಸ್ಥಾಪನೆಯಾಗಿದ್ದು ಅವರ ಆಶಯದಂತೆ ನಾವೆಲ್ಲರು ಇಂದು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದೇವೆ. ಪ್ರತಿ ವರ್ಷದ ಜಾತ್ರೆಯ ಸುಸಂದರ್ಭದಲ್ಲಿ ನಾವೆಲ್ಲರೂ ಸೇರುವ ಅವಕಾಶವನ್ನು ಕಲ್ಪಿಸಿಕೊಟ್ಟಿರುವ ಪೂಜ್ಯ ಶ್ರೀಗಳವರಿಗೆ ಚಿರಋಣಿಯಾಗಿರಬೇಕು. ಹನ್ನೊಂದು ರೂಪಾಯಿಗಳಿಂದ ಪ್ರಾರಂಭವಾದ ನಮ್ಮ ಈ ಸಂಘವು ಇಂದು ಏಳು ಕೋಟಿಗೂ ಮೀರಿದ್ದು, ಸಂಘದ ಹಣದಿಂದ ಮೈಸೂರಿನಲ್ಲಿ ಬೃಹತ್ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿರುವುದಲ್ಲದೇ ವರುಣ ಕೆರೆಯ ಹತ್ತಿರ ಸಂಘದ ವತಿಯಿಂದ ಸದಸ್ಯರಿಗಾಗಿ ಬಡಾವಣೆ ನಿರ್ಮಿಸಲಾಗಿದೆ. ಹೀಗೆ ಸಂಘವು ಹಲವಾರು ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದು, ಸಂಘವು 75 ವರ್ಷಗಳ ಅಂಚಿನಲ್ಲಿರುವ ಈ ಶುಭ ಸಂದರ್ಭದಲ್ಲಿ ವಜ್ರಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಚಿಂತಿಸಲಾಗಿದೆ. ಇದುವರೆವಿಗೂ 7000 ವಿದ್ಯಾರ್ಥಿಗಳ ಹೆಸರು ನೊಂದಾಯಿಸಲ್ಪಟಿರುವುದು ಸಂತೋಷಕರ ವಿಷಯವಾಗಿದೆ ಎಂದು ತಿಳಿಸಿದರು. – **ಚಂದನ ಜೆ. ಮತ್ತು ಶುಭಶ್ರೀ**

# ಸಾಂಸ್ಕೃತಿಕ ಸ್ಪರ್ಧೆಗಳ ಫಲಿತಾಂಶ

## ಜೆಎಸ್‌ಎಸ್ ಪ್ರಾಥಮಿಕ ಶಾಲಾ ವಿಭಾಗ




ಎಲ್ಲಾ ವಿಭಾಗಗಳಲ್ಲೂ ಭಾಗವಹಿಸಿ ಒಟ್ಟಾರೆ ಹೆಚ್ಚು ಅಂಕಗಳನ್ನು ಗಳಿಸಿದ ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಪರ್ಯಾಯ ಪಾರಿತೋಷಕವನ್ನು ಪಡೆದುಕೊಂಡರು

**ಸಮೂಹ ನೃತ್ಯ ಸ್ಪರ್ಧೆಯಲ್ಲಿ** ಹುಲ್ಲಹಳ್ಳಿ ಶಾಲೆಯ ವಿದ್ಯಾರ್ಥಿಗಳು ಒಗ್ಗಟ್ಟಿನಿಂದ ನೃತ್ಯ ಪ್ರದರ್ಶನ ನೀಡುವ ಮೂಲಕ ಮೊದಲನೇ ಬಹುಮಾನವನ್ನು ಪಡೆದರೆ, ಎರಡನೇ ಬಹುಮಾನವನ್ನು ಸಂತೆಮರಹಳ್ಳಿ ಶಾಲೆಯ ವಿದ್ಯಾರ್ಥಿಗಳು ಪಡೆದರು. ಮೂರನೇ ಬಹುಮಾನ ಕಾಮಗೆರೆ ಶಾಲೆಯ ವಿದ್ಯಾರ್ಥಿಗಳ ಪಾಲಾಯಿತು, ನಾಲ್ಕನೇ ಬಹುಮಾನವನ್ನು ಕೋಣನಕುಂಟೆ ಶಾಲೆಯ ವಿದ್ಯಾರ್ಥಿಗಳು ದಕ್ಕಿಸಿಕೊಂಡರು. ರಾಮಾಪುರ ಶಾಲೆಯ ವಿದ್ಯಾರ್ಥಿಗಳು ಐದನೇ ಬಹುಮಾನಕ್ಕೆ ತೃಪ್ತಿಪಟ್ಟರು.

**ಸಮೂಹ ಗಾಯನ ಸ್ಪರ್ಧೆಯಲ್ಲಿ** ಸುತ್ತೂರು ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಗಳಿಸಿಕೊಂಡರೆ, ಮೈಸೂರಿನ ಬಾಲಜಗತ್ ಶಾಲೆಯ ವಿದ್ಯಾರ್ಥಿಗಳು ಎರಡನೇ ಬಹುಮಾನ ಪಡೆದು ಖುಷಿಪಟ್ಟರು. ಮೂರನೇ ಬಹುಮಾನವು ರಾಮಾಪುರ ಶಾಲೆಯ ವಿದ್ಯಾರ್ಥಿಗಳ ಪಾಲಾಯಿತು. ನಾಲ್ಕನೇ ಬಹುಮಾನವನ್ನು ಸರಗೂರು ಶಾಲೆಯ ವಿದ್ಯಾರ್ಥಿಗಳು ಪಡೆಯುವಲ್ಲಿ ಯಶಸ್ವಿಯಾದರು, ಐದನೇ ಬಹುಮಾನವು ಕಾಮಗೆರೆ ಶಾಲೆಯ ವಿದ್ಯಾರ್ಥಿಗಳಿಗೆ ದೊರೆಯಿತು.

**ಸಮೂಹ ಶಾಸ್ತ್ರೀಯ ನೃತ್ಯ ಸ್ಪರ್ಧೆಯಲ್ಲಿ** ಮೈಸೂರಿನ ಸರಸ್ವತಿಪುರಂ ಶಾಲಾ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಪಡೆದು ನಲಿದರೆ, ಎರಡನೇ ಬಹುಮಾನವನ್ನು ಸುತ್ತೂರು ಶಾಲೆಯ ವಿದ್ಯಾರ್ಥಿಗಳು ಪಡೆದು ಸಂಭ್ರಮಿಸಿದರು. ಕೋಣನಕುಂಟೆ ಶಾಲೆಯ ವಿದ್ಯಾರ್ಥಿಗಳು ಮೂರನೇ ಬಹುಮಾನಕ್ಕೆ ತೃಪ್ತಿಪಟ್ಟರು.

**ಶಾಸ್ತ್ರೀಯ ನೃತ್ಯ ಸ್ಪರ್ಧೆಯಲ್ಲಿ** ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನ ಬಾಚಿಕೊಂಡರೆ, 2ನೇ ಬಹುಮಾನವನ್ನು ಸುತ್ತೂರು ಶಾಲಾ ವಿದ್ಯಾರ್ಥಿಗಳು ಪಡೆದರು. ಸರಗೂರು ಶಾಲೆಯ ವಿದ್ಯಾರ್ಥಿಗಳು ಮೂರನೇ ಬಹುಮಾನವನ್ನು ತಮ್ಮದಾಗಿಸಿಕೊಂಡರೆ, ನಾಲ್ಕನೇ ಬಹುಮಾನವನ್ನು ರಾಮಾಪುರ ಶಾಲೆಯ ವಿದ್ಯಾರ್ಥಿಗಳು ಗಿಟ್ಟಿಸಿಕೊಂಡರು. ಐದನೇ ಬಹುಮಾನಕ್ಕೆ ಭಾಜನರಾದವರು ಮೇಟಗಳ್ಳಿ ಶಾಲೆಯ ವಿದ್ಯಾರ್ಥಿಗಳು.

**ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ** ಸುತ್ತೂರು ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನದ ಗರಿಯನ್ನು ಮುಡಿಗೇರಿಸಿಕೊಂಡರೆ, ದ್ವಿತೀಯ ಬಹುಮಾನ ಮೈಸೂರಿನ ರಾಮಾನುಜ ರಸ್ತೆಯ ಬಾಲಜಗತ್ ಶಾಲೆಯ ವಿದ್ಯಾರ್ಥಿಗಳಿಗೆ ಲಭಿಸಿತು.

**ವಚನಾಧಾರಿತ ನೃತ್ಯ ಸ್ಪರ್ಧೆಯಲ್ಲಿ** ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಪಡೆಯುವಲ್ಲಿ ಯಶಸ್ವಿಯಾದರೆ, ದ್ವಿತೀಯ ಬಹುಮಾನವನ್ನು ರಾಮಾಪುರ ಶಾಲೆಯ ವಿದ್ಯಾರ್ಥಿಗಳು ವಚನಾಮೃತ ನೃತ್ಯದ ಮೂಲಕ ಪಡೆದರು.

ಮೂರನೇ ಬಹುಮಾನವು ತಾಳವಾಡಿ ಶಾಲೆಯ ವಿದ್ಯಾರ್ಥಿಗಳ ಪಾಲಾಯಿತು. ನಾಲ್ಕನೇ ಬಹುಮಾನಕ್ಕೆ ಬಾಲಜಗತ್ ಶಾಲೆಯ ವಿದ್ಯಾರ್ಥಿಗಳು ಮತ್ತು ಐದನೇ ಸ್ಥಾನಕ್ಕೆ ಸರಗೂರು ಶಾಲೆಯ ವಿದ್ಯಾರ್ಥಿಗಳು ತೃಪ್ತಿಪಟ್ಟರು.

# ಜಾತ್ರೆ – ಒಂದು ಅಧ್ಯಯನ ಪೀಠದಂತೆ



ಕುಸ್ತಿ ಪಂದ್ಯಾವಳಿ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ಗುಂಡ್ಲುಪೇಟೆ ವಿಧಾನಸಭಾ ಸದಸ್ಯರಾದ ಶ್ರೀ ಸಿ.ಎಸ್. **ನಿರಂಜನ್ ಕುಮಾರ್‌ರವರು** ಮಾತನಾಡುತ್ತಾ, ಜಾತ್ರೆ ಎಂದರೆ ಸಡಗರ. ಎಲ್ಲಾ ರೀತಿಯ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳನ್ನು ಇಲ್ಲಿ ನೋಡಬಹುದು. ಜೆಎಸ್‌ಎಸ್ ಎಂದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರಾದ ಸಂಸ್ಥೆ. ತಮ್ಮನ್ನು ತಾವು ಸಮಾಜಕ್ಕೆ ಅರ್ಪಿಸಿಕೊಂಡ ಶ್ರೀಗಳ ಬಗ್ಗೆ ಎಲ್ಲೆಡೆ ಗೌರವ ಅಭಿಮಾನವಿದೆ. ಸುತ್ತೂರು ಜಾತ್ರೆ ಒಂದು ಅಧ್ಯಯನ ಕೇಂದ್ರವಿದ್ದಂತೆ. ಶ್ರೀಕ್ಷೇತ್ರಕ್ಕೆ ಹೊರ ರಾಜ್ಯದಿಂದಲೂ ಜನರು ಬಂದು ಜಾತ್ರೆಯಲ್ಲಿನ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ. ಭಕ್ತಾದಿಗಳಿಗೆ ಇಲ್ಲಿ ಊಟ, ವಸತಿ, ನಾಟಕಗಳ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳ ವ್ಯವಸ್ಥೆ ಇದೆ. ರೈತರಿಗೆ ಕೃಷಿ ಮೇಳದಲ್ಲಿ ವಿವಿಧ ತಳಿಗಳ ಬಗ್ಗೆ ಹಾಗೂ ಆಧುನಿಕ ಯಂತ್ರೋಪಕರಣಗಳ ಬಳಕೆ ಬಗ್ಗೆ ಮಾಹಿತಿಯನ್ನು ಪಡೆಯಬಹುದು. ಕುಸ್ತಿ ಎಂದರೆ ಎಲ್ಲರಿಗೂ ಇಷ್ಟವಾದ ಕ್ರೀಡೆ, ಇದು ಆಧುನಿಕ ಕ್ರೀಡೆಯಲ್ಲ. ರಾಜಮನೆತನ ಕಾಲದಿಂದಲೂ ಆಡುತ್ತಿರುವ ಒಂದು ಐತಿಹಾಸಿಕ ಕ್ರೀಡೆ, ಈಗಲೂ ಸಹ ಕುಸ್ತಿ ತನ್ನದೇ ಆದ ಪ್ರತಿಷ್ಠೆಯನ್ನು ಉಳಿಸಿಕೊಂಡು ಬಂದಿದೆ ಎಂದರು. – **ವಿನುವಿರಾಟ್** ಸಿ.

# ಕುಸ್ತಿ ಕಲೆಗೆ ಸಿಗಲಿ ನೆಲೆ



ಮಾಜಿ ಸಚಿವರಾದ ಶ್ರೀ **ಅಡಗೂರು ಹೆಚ್. ವಿಶ್ವನಾಥ್‌ರವರು** ಮಾತನಾಡಿ, ಕುಸ್ತಿಯು ಇಂದಿನ ಕ್ರೀಡೆಯಲ್ಲ, ರಾಜ–ಮಹಾರಾಜರ ಕಾಲದಿಂದಲೂ ಸಾಗಿ ಬಂದಿದೆ. ಈ ಪಂದ್ಯಾವಳಿಯನ್ನು ಶ್ರೀಕ್ಷೇತ್ರದಲ್ಲಿ ಆಯೋಜಿಸಿ ಪರಂಪರೆಯನ್ನು ಉಳಿಸಿಕೊಂಡು ಬರುತ್ತಿರುವುದು ಮೆಚ್ಚುವಂತದ್ದು, ಜಾತ್ರೆಯಲ್ಲಿ ಮನರಂಜನೆ ಮಾತ್ರವಲ್ಲದೆ, ಅನೇಕ ವಿಚಾರಸಂಕಿರಣಗಳ ಮೂಲಕ ಜ್ಞಾನ ಪಡೆದುಕೊಳ್ಳಬಹುದಾಗಿದೆ. ನಾನು ಸಹ ಜೆಎಸ್‌ಎಸ್ ಸಂಸ್ಥೆಯ ವಿದ್ಯಾರ್ಥಿ ಎಂದು ಹೇಳಲು ಹೆಮ್ಮೆಯೆನಿಸುತ್ತದೆ ಎಂದು ಪೂಜ್ಯರ ಕಾರ್ಯಗಳ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. – **ತೇಜ**




**ಚಿತ್ರಕಲಾ ಸ್ಪರ್ಧೆ ಉದ್ಘಾಟನೆ:** ಪರಮಪೂಜ್ಯರು, ಶ್ರೀ ಸದ್ಗುರು ಬೋಧಿನಾಥ ವೇಲಾಯನ ಸ್ವಾಮಿಗಳು, ಡಾ. ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು, ಶ್ರೀಮತಿ ನಿರ್ಮಲ ಸಿ. ಎಲಿಗಾರ, ಶ್ರೀ ಹೆಚ್. ವೆಂಕಟೇಶ್, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಎಸ್.ಎ. ರಾಮದಾಸ್ ಮೊದಲಾದವರಿದ್ದಾರೆ.

# ಉಪಕಸುಬುಗಳನ್ನು ಅಳವಡಿಸಿಕೊಳ್ಳಿ



ಶಾಸಕರು ಹಾಗೂ ಜಾತ್ಯತೀತ ಜನತಾದಳದ ರಾಜ್ಯಾಧ್ಯಕ್ಷರಾದ **ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರು** ಜಾತ್ರೆಯಲ್ಲಿ ಮಾತನಾಡಿ ಮನುಷ್ಯನು ದಿನದ ಜಂಜಾಟದಲ್ಲಿ ಮುಳುಗಿರುತ್ತಾನೆ. ಅವನಿಗೆ ಶಾಂತಿ ಬೇಕಾಗಿದೆ. ಸುತ್ತೂರು ಶ್ರೀಕ್ಷೇತ್ರ ಏರ್ಪಡಿಸಿರುವ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೆ ಮನಸ್ಸಿಗೆ ನೆಮ್ಮದಿ, ಶಾಂತಿ ಸಿಗುತ್ತದೆ. ಜಾತ್ರಾ ಮಹೋತ್ಸವದಲ್ಲಿ ಕೃಷಿ ಮೇಳವನ್ನು ಆಯೋಜಿಸಿ ಸಾವಯವ ಕೃಷಿ ಪದ್ಧತಿ, ಮುಂತಾದ ಕೃಷಿಯೇತರ ಚಟುವಟಿಕೆಗಳನ್ನು ರೈತರೇ ಅಳವಡಿಸಿಕೊಳ್ಳಲು ಶ್ರೀಮಠವು ನೆರವಾಗಿದೆ. ಹೈನುಗಾರಿಕೆ, ಪಶು ಸಂಗೋಪನೆ ಮೊದಲಾದ ಕಸಬುಗಳನ್ನು ರೈತರು ಹೆಚ್ಚು ಹೆಚ್ಚು ಅಳವಡಿಸಿಕೊಳ್ಳಬೇಕು, ಇದರಿಂದ ರೈತನು ಆರ್ಥಿಕವಾಗಿ ಸದೃಢನಾಗುತ್ತಾನೆ. ಶ್ರೀಕ್ಷೇತ್ರದಲ್ಲಿ ಓದಿದ ಮಕ್ಕಳು ಇಂದು ದೇಶ ವಿದೇಶಗಳಲ್ಲಿ ನೆಲೆಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. – **ಮದನ್ ಕೆ.ಪಿ.**

# ವಿವಿಧ ಬೆಳೆಗಳಲ್ಲಿ ಅತ್ಯುತ್ತಮ ಸಾಧನೆಗೈದ ರೈತರ ವಿವರ – 2020

ಭತ್ತದ ಬೆಳೆ ಬೆಳೆಯುವ ವಿಭಾಗದಲ್ಲಿ ನಂಜನಗೂಡು ತಾಲ್ಲೂಕಿನ ಜೀಮಾರಹಳ್ಳಿಯ ಕೃಷಿಕ ಶ್ರೀ ರೇವಣ್ಣನವರು ಭೂತಾಯಿಯ ಋಣ ತೀರಿಸುವವನಂತೆ ಎಕರೆಗೆ 29 ಕ್ವಿಂಟಾಲ್ ಭತ್ತವನ್ನು ಬೆಳೆದು ಪ್ರಥಮ ಬಹುಮಾನವನ್ನು ಗಳಿಸಿದರೆ, ಬಸವನಪುರದ ಕೃಷಿಕ ಶ್ರೀ ಬಿ.ಪಿ. ಭುಜಂಗಾರಾಧ್ಯರವರು ಆಧುನಿಕ ಕೃಷಿ ಪದ್ಧತಿಯ ಮುಖಾಂತರ ದ್ವಿತೀಯ ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದಾರೆ.

ನೇಂದ್ರ ಬಾಳೆ ಬೆಳೆಯುವ ವಿಭಾಗದಲ್ಲಿ ಯಳಂದೂರು ತಾಲ್ಲೂಕು, ಕುಮಾರನಪುರದ ಶ್ರೀ ಕೆ.ಎಂ. ನಂದೀಶ್‌ರವರು ಎಕರೆಗೆ 10 ಟನ್ ನೇಂದ್ರ ಬಾಳೆಯನ್ನು ಬೆಳೆದು ಬಾಳೆ ವ್ಯಾಪಾರಿಗಳು ಮನೆ ಬಾಗಿಲಿಗೆ ಬರುವಂತೆ ಮಾಡಿ ಪ್ರಥಮ ಬಹುಮಾನ ಪಡೆದರೆ, ಯರಗಂಬಳ್ಳಿಯ ಕೃಷಿಕ ಶ್ರೀ ಜೆ. ಮಲ್ಲೇಶರವರು 9 ಟನ್ ನೇಂದ್ರ ಬಾಳೆ ಬೆಳೆದು ದ್ವಿತೀಯ ಬಹುಮಾನವನ್ನು ಪಡೆದರು.

ಟೋಮ್ಯಾಟೊ ಬೆಳೆ ಬೆಳೆಯುವ ವಿಭಾಗದಲ್ಲಿ ಚಾಮರಾಜನಗರ ತಾಲ್ಲೂಕಿನ ಕಲ್ಪುರದ ಮಹಿಳಾ ಕೃಷಿಕರಾದ ಶ್ರೀಮತಿ ಸುಮಾರವರು ಪಟ್ಟ ಶ್ರಮದ ಪ್ರತಿಫಲವಾಗಿ ಎಕರೆಗೆ 25 ಟನ್ ಟೋಮ್ಯಾಟೊವನ್ನು ಬೆಳೆದು ಪ್ರಥಮ ಬಹುಮಾನವನ್ನು ಗಳಿಸಿ ಸಾರ್ಥಕತೆಯ ನಗೆ ಬೀರಿದರೆ, ಚಾಮರಾಜನಗರ ತಾಲ್ಲೂಕಿನ ಗೋವಿಂದವಾಡಿಯ ಕೃಷಿಕ ಶ್ರೀ ಕೆ.ಜಿ. ಗಂಗಾಧರಮೂರ್ತಿರವರು ಎಕರೆಗೆ 21 ಟನ್ ಟೋಮ್ಯಾಟೊವನ್ನು ಬೆಳೆಯುವಲ್ಲಿ ಯಶಸ್ವಿಯಾಗಿ ದ್ವಿತೀಯ ಬಹುಮಾನ ಪಡೆದರು.

ಕಬ್ಬು ಬೆಳೆ ಬೆಳೆಯುವ ವಿಭಾಗದಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಗ್ರಾಮದ ಕೃಷಿಕ ಶ್ರೀ ನಿರಂಜನಮೂರ್ತಿರವರು ಎಕರೆಗೆ 82 ಟನ್ ಕಬ್ಬು ಬೆಳೆದು ಕರ್ನಾಟಕದ ಪ್ರಮುಖ ಬೆಳೆಯು ಸ್ಥಾನವನ್ನು ಗಟ್ಟಿಗೊಳಿಸುವಲ್ಲಿ ಸಹಕಾರಿಯಾದವರಂತೆ ಪ್ರಥಮ ಬಹುಮಾನ ಗಳಿಸಿದರೆ, ಕೊಳ್ಳೇಗಾಲ ತಾಲ್ಲೂಕಿನ ಮುಳ್ಳೂರು ಗ್ರಾಮದ ರೈತ ಶ್ರೀ ಲಿಂಗಪ್ಪನವರು ಎಕರೆಗೆ 72 ಟನ್ ಕಬ್ಬು ಬೆಳೆದು ಸಣ್ಣ ಇಳುವರಿದಾರರ ಆಶಾಕಿರಣವಾದವರಂತೆ ಎರಡನೇ ಬಹುಮಾನವನ್ನು ಕೈಹಿಡಿದರು.

ಮುಸುಕಿನಜೋಳ ಬೆಳೆ ಬೆಳೆಯುವ ವಿಭಾಗದಲ್ಲಿ ಹನೂರು ತಾಲ್ಲೂಕು, ಗಂಗಾಧರಕಟ್ಟೆಯ ಗ್ರಾಮದ ಕೃಷಿಕ ಶ್ರೀ ಕೆ.ಬಿ. ವೃಷಬೇಂದ್ರಸ್ವಾಮಿರವರು ಎಕರೆಗೆ 27 ಕ್ವಿಂಟಾಲ್ ಮುಸುಕಿನಜೋಳ ಬೆಳೆದು ಜಮೀನನೆಲ್ಲಾ ಹಳದಿ ಬಣ್ಣಕ್ಕೆ ಬದಲಾಯಿಸಿ ಪ್ರಥಮ ಬಹುಮಾನವನ್ನು ಗಿಟ್ಟಿಸಿಕೊಂಡರೆ, ಹನೂರು ತಾಲ್ಲೂಕು, ನಾಗನತ್ತ ಗ್ರಾಮದ ಮಹಿಳಾ ಕೃಷಿಕರಾದ ಶ್ರೀಮತಿ ಶಿವಮ್ಮರವರು ಎಕರೆಗೆ 21 ಕ್ವಿಂಟಾಲ್ ಮುಸುಕಿನಜೋಳವನ್ನು ಬೆಳೆದು ಪೌಷ್ಟಿಕತೆಯ ಮಹತ್ವವನ್ನು ಎರಡನೇ ಬಹುಮಾನದ ಮೂಲಕ ತಿಳಿಸಿದರು.

ಪೋಲ್‌ಬೀನ್ಸ್ ಬೆಳೆ ಬೆಳೆಯುವ ವಿಭಾಗದಲ್ಲಿ ಗುಂಡ್ಲುಪೇಟೆ ತಾಲ್ಲೂಕು, ಮಂಚಹಳ್ಳಿಯ ಶ್ರೀ ಎ. ಸೋಮಶೇಖರ್‌ರವರು ಎಕರೆಗೆ 10 ಕ್ವಿಂಟಾಲ್ ಪೋಲ್‌ಬೀನ್ಸ್ ಬೆಳೆದು ಮಾರುಕಟ್ಟೆಯಲ್ಲಿ ದಿನಬಳಕೆ ತರಕಾರಿಗಳ ಇಳುವರಿಯನ್ನು ಹೆಚ್ಚಿಸಿ ಪ್ರಥಮ ಬಹುಮಾನ ಪಡೆದರೆ, ಗುಂಡ್ಲುಪೇಟೆ ತಾಲ್ಲೂಕಿನ ಕೆಬ್ಬೇಪುರದ ಕೃಷಿಕ ಶ್ರೀ ಚಿಕ್ಕವೀರಪ್ಪನವರು ಎಕರೆಗೆ 8 ಟನ್ ಪೋಲ್‌ಬೀನ್ಸ್ ಬೆಳೆದು ದ್ವಿತೀಯ ಬಹುಮಾನ ಪಡೆಯುವಲ್ಲಿ ಯಶಸ್ವಿಯಾದರು. – **ಅನುಷಾ ಆರ್.**

# ಭಜನೆ ಐಕ್ಯತೆಯ ಪ್ರತೀಕ



**ಶಿವ... ಶಿವಾ... ನಮ್ಮ ಜನ್ಮ ಸಾರ್ಥಕವಾಯಿತು ನನ್ನಪ್ಪಾ...**

ದೇವರು-ಭಕ್ತರು ಹಾಗೂ ಗುರು ಶಿಷ್ಯರ ನಡುವಿನ ಸಂಬಂಧದ ಸೇತುವೆಯಂತಿರುವ ಭಜನೆಯು ಭಕ್ತರಲ್ಲಿ ಐಕ್ಯತೆ, ಸಾತ್ವಿಕತೆ, ತಾತ್ವಿಕತೆ, ಭಕ್ತಿ, ಜ್ಞಾನ, ಸಂಸ್ಕೃತಿಗಳನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದೆ. ಇಂದಿನ ಜನರ ಜೀವನಶೈಲಿ ಬದಲಾಗುತ್ತಿದ್ದು ಭಜನಾ ಕಲಾ ಪ್ರಕಾರ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿರುವುದನ್ನು ಗಮನಿಸಿದ ಪೂಜ್ಯ ಜಗದ್ಗುರುಗಳ ಆಶೀರ್ವಾದದಿಂದ ಕಳೆದ 28 ವರ್ಷಗಳಿಂದ ಈ ಭಜನಾಮೇಳ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ.

ಈ ವರ್ಷದ ಭಜನಾಮೇಳದಲ್ಲಿ ರಾಜ್ಯದ 18 ಜಿಲ್ಲೆಗಳು ಹಾಗೂ ನೆರೆಯ ಕೇರಳ ರಾಜ್ಯವು ಸೇರಿದಂತೆ ಒಟ್ಟು 700ಕ್ಕೂ ಹೆಚ್ಚು ತಂಡಗಳು ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಬಳ್ಳಾರಿ, ಹಾವೇರಿ, ಚಿತ್ರದುರ್ಗ, ವಿಜಯಪುರ, ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ, ಚಾಮರಾಜ ನಗರ ಮೊದಲಾದ ಜಿಲ್ಲೆಗಳಿಂದ ಪಾಲ್ಗೊಂಡಿದ್ದವು.

ಭಜನಾ ಮೇಳದಲ್ಲಿ ಏಳು ಹಂತಗಳಲ್ಲಿ ಸ್ಪರ್ಧೆಗಳನ್ನು ನಡೆಸುತ್ತಿದ್ದು ಒಟ್ಟು 43 ಬಹುಮಾನಗಳನ್ನು ನೀಡಲಾಗುತ್ತಿದೆ. ಪುರುಷರ ಭಜನಾ ಮೇಳಕ್ಕೆ (ಹತ್ತು), ಪುರುಷರ ಏಕತಾರಿಯಿಂದ (ಐದು) ಹಾಗೆಯೇ ಮಹಿಳಾ ಗ್ರಾಮಾಂತರ ವಿಭಾಗದ ಭಜನಾ ಮೇಳಕ್ಕೆ (ಹತ್ತು), ಮಹಿಳಾ ತಂಡಗಳು ನಗರ ವಿಭಾಗಕ್ಕೆ (ಐದು), ಮಹಿಳಾ ಏಕತಾರಿ ವಿಭಾಗಕ್ಕೆ (ಐದು), ಮಕ್ಕಳ ವಿಭಾಗದಿಂದ (ಐದು) ಬಹುಮಾನಗಳನ್ನು ಹಾಗೂ ಹೊರ ರಾಜ್ಯಗಳ ವಿಭಾಗದ ವಿಜೇತರಿಗೆ ಮೂರು ಬಹುಮಾನಗಳನ್ನು ನೀಡಲಾಯಿತು.

ವಿಜೇತ ತಂಡಗಳಿಗೆ ನಗದು ಬಹುಮಾನಗಳ ಜೊತೆಗೆ ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ, ಹಾಗೂ ಪ್ರಯಾಣ ಭತ್ಯೆ ನೀಡಲಾಗುತ್ತಿದೆ. ಅಲ್ಲದೇ ಭಾಗವಹಿಸಿದ ಎಲ್ಲ ತಂಡಗಳ ಸ್ಪರ್ಧಿಗಳಿಗೆ ಪ್ರಶಂಸಾ ಪತ್ರಗಳನ್ನು ಹಾಗೂ ಪ್ರಯಾಣ ಭತ್ಯೆಯನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

ತೀರ್ಪುಗಾರರಾಗಿ ಸಂಗೀತ ವಿದುಷಿಯರಾದ ಶ್ರೀಮತಿ ಸುಧಾಮಣಿ, ಶ್ರೀಮತಿ ಲತಾ ದೇಶಪಾಂಡೆ, ಶ್ರೀಮತಿ ಕೆ.ಎಸ್. ರಮಾಮಣಿ ಹಾಗೂ ಬದನವಾಳು ಶ್ರೀ ಬಸವರಾಜಶಾಸ್ತ್ರಿ, ಮಾಸ್ಟರ್ ಬಿ. ಪಂಚಾಕ್ಷರ ಸ್ವಾಮಿ ಹಾಗೂ ಶ್ರೀ ಪಿ. ಮಹದೇವಪ್ಪ ಅವರುಗಳು ಭಾಗವಹಿಸಿದ್ದರು ಎಂದು ಸಂಚಾಲಕರಾದ ಪ್ರೊ. ಡಿ.ಎಸ್. ಸದಾಶಿವ ಮೂರ್ತಿಯವರು ತಿಳಿಸಿದರು.

# ಸದ್ದು ಗದ್ದಲವಿಲ್ಲದ ಸಾಧನೆ



ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯುವ ಚಿತ್ರಕಲಾ ಸ್ಪರ್ಧೆ ಉದ್ಘಾಟನೆ ಹಾಗೂ ಭಜನಾ ಮೇಳ ಸಾಮಾರೋಪ ಸಮಾರಂಭದ ದಿವ್ಯ ಸಮ್ಮುಖ ವಹಿಸಿದ್ದ ಕಲಬುರ್ಗಿಯ ಮೌನ ತಪಸ್ವಿ ಶ್ರೀ **ಜಡೆಶಾಂತಲಿಂಗ ಮಹಾಸ್ವಾಮಿಗಳವರು** ನಲವತ್ತಾರು ವರ್ಷಗಳಿಂದ ಮೌನಾಚರಣೆಯಲ್ಲಿರುವ ಕಾರಣ ಇವರ ಪರವಾಗಿ ಇವರ ಮಠದವರೇ ಆದ ಶ್ರೀ ಅಮರೇಶ್ವರ ಶಿವಾಚಾರ್ಯ ಸ್ವಾಮಿಗಳವರು ಮಾತನಾಡುತ್ತಾ, ಶ್ರೀ ಸುತ್ತೂರು ಮಠವು ನೈತಿಕ, ಧಾರ್ಮಿಕ, ವೈಚಾರಿಕತೆಯನ್ನು ಬಿತ್ತುವ ಆಧ್ಯಾತ್ಮಿಕ ಶಕ್ತಿ ಕೇಂದ್ರವಾಗಿದೆ. ಆದಿಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರು ಈ ಜಾತ್ರಾ ಮಹೋತ್ಸವದ ಪರಂಪರೆಗೆ ಮೂಲ ಕಾರಣೀಭೂತರಾಗಿದ್ದಾರೆ. ಅವರ ತಪಸ್ಸಿನ ಫಲದಿಂದಲೇ ಈ ಸಂಸ್ಥೆ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧವಾಗಿದೆ. ಮನುಷ್ಯ ಪಂಚ ಪರುಶಗಳನ್ನು ಆಚರಿಸುವುದರ ಮೂಲಕ ಬ್ರಹ್ಮ ತತ್ವಗಳನ್ನು ಅರಿತು ಸದ್ದು ಗದ್ದಲವಿಲ್ಲದೆ ಮೌನವಾಗಿ ಸಾಧನೆಗೈಯಬೇಕು. ಅಂತಹ ಸಾಧನೆ ಈ ಶಕ್ತಿ ಕೇಂದ್ರದಿಂದ ಆಗುತ್ತಿರುವುದನ್ನು ಪ್ರತ್ಯಕ್ಷವಾಗಿ ಕಾಣಬಹುದು. ವ್ಯಸನ ಮುಕ್ತ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಇಂತಹ ಜಾತ್ರೆಗಳು ಪ್ರಮುಖ ಪಾತ್ರ ವಹಿಸುತ್ತಿದ್ದು ಅದಕ್ಕಾಗಿ ಶ್ರೀಗಳಿಗೆ ನಾವೆಲ್ಲರೂ ಕೃತಜ್ಞರಾಗಬೇಕೆಂದು ಶುಭ ಹಾರೈಸಿದರು.**– ತೇಜ, ಅನನ್ಯ ಜಿ.ಎಸ್.**

# ಜನತೆಯ ಚಿತ್ತ ಸನ್ಮಾರ್ಗದತ್ತ



ಕಪಿಲ ನದಿಯ ತಟದಲ್ಲಿ ಸ್ಥಾಪಿಸಿರುವ ಶ್ರೀಮಠವು ಪವಿತ್ರ ಸ್ಥಳವಾಗಿದೆ. ಇಲ್ಲಿ ಸಾಂಸ್ಕೃತಿಕ, ಧಾರ್ಮಿಕ, ಕೃಷಿ, ದೇಸಿ ಆಟಗಳ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಪುಣ್ಯಕಾರ್ಯವೆಂದು ಉತ್ತರ ಪ್ರದೇಶದ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ **ಸ್ವತಂತ್ರ ದೇವ್ ಸಿಂಗ್‌ರವರು** ತಿಳಿಸಿದರು. ಸಮಾಜ ಸುಧಾರಣೆಯಲ್ಲಿ ದಕ್ಷಿಣ ಭಾರತದ ಮಠಮಾನ್ಯಗಳು ಶ್ರಮಿಸುತ್ತಿವೆ ಹಾಗೂ ಪೂಜ್ಯರ ಧರ್ಮಸಂದೇಶ ಮತ್ತು ಮಾರ್ಗದರ್ಶನದಿಂದ ಬದುಕುತ್ತಿರುವ ಜನರು ಸನ್ಮಾರ್ಗಿಗಳಾಗಿದ್ದಾರೆ. ಕಾಶಿ ವಿಶ್ವನಾಥನ ನಗರಿ ಹಾಗೂ ವಿಂಧ್ಯಾ ನದಿಯ ತೀರದಿಂದ ಬಂದಿರುವ ನಾನು, ಶ್ರೀಮಠಕ್ಕೆ ಉತ್ತರಪ್ರದೇಶದ ಜನತೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು. **– ಅನುಷ.ಪಿ**

# ದಾನ ದಾನಕ್ಕೆ ಮಿಗಿಲು ರಕ್ತದಾನ




ಸುತ್ತೂರು ಜಾತ್ರೆಯಲ್ಲಿ ಶುಕ್ರವಾರ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಿದ ದಾವಣಗೆರೆಯ ಮಹಡಿಮನೆ ಶ್ರೀ ಶಿವಕುಮಾರ್ ಅವರು ಗಮನ ಸೆಳೆದರು. ಮುಖಕ್ಕೆ ರಾಷ್ಟ್ರಧ್ವಜದ ಬಣ್ಣ ಬಳಿದುಕೊಂಡಿದ್ದ ಅವರು ದೇಹದ ಮೇಲೆ ಹೃದಯ ಹಾಗೂ ರಕ್ತನಾಳಗಳ ಚಿತ್ರ ಬಿಡಿಸಿಕೊಂಡಿದ್ದರು. ರಕ್ತದಾನ ಜೀವದಾನ ಎಂದು ಬರೆಯಲಾಗಿತ್ತು. ಜಾತ್ರೆಗೆ ಬಂದಿದ್ದವರು ಕುತೂಹಲದಿಂದ ಅವರನ್ನು ಸುತ್ತುವರಿದರು. ರಕ್ತದಾನ ಶ್ರೇಷ್ಠ ದಾನ, ಆದರೆ ಹೆಚ್ಚಿನ ಜನರು ರಕ್ತದಾನಕ್ಕೆ ಮುಂದೆ ಬರುವುದಿಲ್ಲ. ಅವರಲ್ಲಿ ಜಾಗೃತಿ ಮೂಡಿಸುವುದು ನನ್ನ ಉದ್ದೇಶ ಎಂದು 50 ವರ್ಷ ವಯಸ್ಸಿನ ಶಿವಕುಮಾರ್ ತಿಳಿಸಿದರು.

ಕಳೆದ 21 ವರ್ಷಗಳಿಂದಲೂ ರಕ್ತದಾನ ಮಾಡುತ್ತಿದ್ದೇನೆ. 70ಕ್ಕೂ ಹೆಚ್ಚು ಸಲ ನಾನು ರಕ್ತ ಕೊಟ್ಟಿದ್ದೇನೆ. ನನ್ನ ಆರೋಗ್ಯ ವೃದ್ಧಿಸಿದೆಯೇ ಹೊರತು ಅನಾರೋಗ್ಯ ಉಂಟಾಗಿಲ್ಲ. ರಕ್ತದಾನದಿಂದ ಯಾವುದೇ ತೊಂದರೆ ಉಂಟಾಗದು ಎಂದರು. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರನ್ನು ಭೇಟಿಯಾಗುವುದು ನನ್ನ ಉದ್ದೇಶ. ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಲು ವಿಶ್ವಪರ್ಯಟನೆ ಮಾಡುವ ಗುರಿಯೂ ಇದೆ ಎಂದು ಹೇಳಿದರು.

# ಕುಸ್ತಿ ಕಲೆ; ಅರಮನೆಯಿಂದ ಗುರುಮನೆಯಲ್ಲಿ ನೆಲೆ



ಕುಸ್ತಿ ಪಂದ್ಯಾವಳಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಮಂಡ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ **ಕೆ.ಟಿ. ಶ್ರೀಕಂಠೇಗೌಡರವರು** ಮಾತನಾಡುತ್ತಾ, ಕುಸ್ತಿಯೊಂದು ರೋಚಕವಾದ ಕ್ರೀಡೆ, ಹಿಂದೆ ಮೈಸೂರು ರಾಜ ಮಹಾರಾಜರು ಕುಸ್ತಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದ್ದರು. ಇಂದು ಸುತ್ತೂರು ಶ್ರೀಮಠವು ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಪ್ರತಿವರ್ಷ ಕುಸ್ತಿಗೆ ಆದ್ಯತೆಯನ್ನು ನೀಡುತ್ತಾ ಬಂದಿದೆ. ಕುಸ್ತಿ ಪಂದ್ಯಾವಳಿಯನ್ನು ಪ್ರೋತ್ಸಾಹಿಸುತ್ತಿರುವ ಶ್ರೀಮಠಕ್ಕೆ ನನ್ನ ನಮನಗಳು. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳಿಂದ ಸ್ಥಾಪಿತವಾದ ಮಠವು ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವ ಶ್ರೀಮಠವು ದೇಶ ವಿದೇಶಗಳಲ್ಲೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶೈಕ್ಷಣಿಕ ಕ್ರಾಂತಿಯನ್ನೇ ಉಂಟು ಮಾಡಿದೆ ಎಂದರು.

ಪೂಜ್ಯ ಶ್ರೀ ರಾಜೇಂದ್ರ ಶ್ರೀಗಳವರು ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಊಟ, ವಸತಿ, ಶಿಕ್ಷಣ, ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ್ದಾರೆ. ಈಗಿನ ಪೂಜ್ಯರು ಜಗದ್ಗುರುಗಳವರ ಮಾರ್ಗದರ್ಶನ ಹಾಗೂ ಆಶೀರ್ವಾದದಿಂದ ಜಾತ್ರಾ ಮಹೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಅದಕ್ಕಾಗಿ ಪೂಜ್ಯರಿಗೆ ಪ್ರಣಾಮಗಳನ್ನು ಸಲ್ಲಿಸುತ್ತೇನೆ. ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿರುವ ಕುಸ್ತಿಪಟುಗಳಿಗೂ ಶುಭವನ್ನು ಕೋರುತ್ತೇನೆ. **– ಮದನ್ ಕೆ.ಪಿ**

## ಸಾಂಸ್ಕೃತಿಕ ಕಾರ್ಯಕ್ರಮಗಳು



**26 ಜನವರಿ 2020 ಭಾನುವಾರ**

ಗದ್ದುಗೆ ಆವರಣದಲ್ಲಿ ಬೆಳಗ್ಗೆ 7.30ಕ್ಕೆ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ತಿರುಳು ಕಾರ್ಯಕ್ರಮವಿರುತ್ತದೆ.



ಭಜನಾ ಮೇಳ ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಿಗೆ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದ ಕಾಯಕಬಂಧುಗಳಿಗೆ ಪರಮಪೂಜ್ಯರ ದಿವ್ಯ ಸಾನ್ನಿಧ್ಯದಲ್ಲಿ ಚಿತ್ರನಟ ಡಾ. ಶಿವರಾಜ್‌ಕುಮಾರ್ ಅವರು ಅಭಿನಂದಿಸಿದರು.

# ಅವರು ಮೊಬೈಲ್; ಇವರು ಸೀರಿಯಲ್!

(ಮೊದಲ ಪುಟದಿಂದ)

ಹಾಡುಗಳನ್ನು ಹಾಡುವ, ಕೇಳುವ ಆಸಕ್ತಿ ಬೆಳೆಸಿಕೊಳ್ಳಬೇಕು ಇದರಿಂದ ಮನಸ್ಸಿಗೆ ಶಾಂತಿ ನೆಮ್ಮದಿ ದೊರೆಯುತ್ತದೆ. ಮನುಸ್ಸು ಸದಾ ಪ್ರಫುಲ್ಲವಾಗಿರುತ್ತದೆ. ಮಕ್ಕಳ ಕೈಗೆ ಮೊಬೈಲ್ ಕೊಟ್ಟು ಪಾಲಕರು ಟಿವಿ ನೋಡುವುದರಲ್ಲಿ ಕಾಲ ಕಳೆಯುವ ಬದಲು ಮಕ್ಕಳನ್ನು ಚಿತ್ರ ಕಲೆ, ಭಜನೆ, ಸಾಹಿತ್ಯ ರಚನೆ ಮೊದಲಾದ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸಬೇಕು. ಆಗ ಮಕ್ಕಳ ಮನೋವಿಕಾಸ ಸಾಧ್ಯವಾಗುತ್ತದೆ. ಮಕ್ಕಳು ಮನೆಯಲ್ಲಿ ಕುಳಿತುಕೊಳ್ಳುವುದರ ಬದಲು ಹೊರಗೆ ಬಿಡಬೇಕು ಆಗ ಅವರು ಸಮಾಜದ ಬಗ್ಗೆ ತಿಳಿದುಕೊಳ್ಳುತ್ತಾರೆ. ಎಲ್ಲಾ ಧರ್ಮೀಯರು ಹಾಡುವ ಭಜನಾ ಕಲೆ ನಮ್ಮ ಪರಂಪರೆಯ ದ್ಯೋತಕವಾಗಿದೆ. ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೊಂದಿರುವ ಭಾರತವನ್ನು ವಿಶ್ವ ಗುರುವಿನಂತೆ ಕಾಣಬೇಕಾಗುತ್ತದೆ.

ನಮ್ಮ ರೈತರು ಆಧುನಿಕ ಯಂತ್ರೋಪಕರಣಗಳ ಬಳಕೆಯನ್ನು ತಿಳಿದುಕೊಂಡು ಹೆಚ್ಚು ಇಳುವರಿ ಪಡೆಯಬೇಕು. ಹಾಗೆಯೇ ಕೃಷಿಯನ್ನು ಲಾಭದಾಯಕವಾಗಿಸಲು ಸಾವಯವ ಬೇಸಾಯವನ್ನು ಅನುಸರಿಸಬೇಕು ಎಂದು ತಿಳಿಸಿದರು.– ವಿನುವಿರಾಟ್ ಮತ್ತು ರಕ್ಷಿತ .ವಿ

(ಮೊದಲ ಪುಟದಿಂದ)

## ಹೊರಟಿದ್ದೆ ನಾನು ನನ್ನೂರ ಜಾತ್ರೆಗೆ

ಹಿಡಿದು"ಎಂಬ ಸ್ವರಚಿತ ಕವನವನ್ನು ವಾಚಿಸುವ ಮೂಲಕ ನಾವು ಮರೆತು ಹೋಗಿರುವ ಎಲ್ಲಾ ರೀತಿಯ ದೇಸಿ ಕಲೆಗಳನ್ನು ಸಮನ್ವಯಗೊಳಿಸುವ ಮೂಲಕ ನಮ್ಮ ಬಾಲ್ಯ ಜೀವನವನ್ನು ನೆನಪಿಸುವಂತಹ ಕೆಲಸವನ್ನು ಈ ಜಾತ್ರೆ ಮಾಡುತ್ತಿದೆ ಎಂದು ಹೇಳಿದರು.

ಶ್ರೀಕ್ಷೇತ್ರವು ನಮ್ಮ ದೇಶದ ಸಂಸ್ಕೃತಿ ಮತ್ತು ಪರಂಪರೆಯ ಹಿನ್ನೆಲೆಯನ್ನು ಕಾಪಿಟ್ಟುಕೊಂಡು ವಿಸ್ತರಿಸುತ್ತಿದ್ದು, ಶ್ರೀಗಳ ಜನಸೇವೆ ಮತ್ತು ಮಾರ್ಗದರ್ಶನ ಭವಿಷ್ಯದ ಸಮಾಜಕ್ಕೆ ದಾರಿದೀಪವಾಗಿದೆ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸುವ ಕ್ಷೇತ್ರವಾಗಿ ಸಮಾಜಪರ ಕಾರ್ಯಗಳನ್ನು ಮಾಡುವ ಮೂಲಕ ಎಲ್ಲಾ ಆಯಾಮಗಳಿಂದ ಬದುಕನ್ನು ಜೀವಂತಗೊಳಿಸುವ ಕ್ರಿಯಾಶೀಲತೆಯನ್ನು ಶ್ರೀಮಠ ಹೊಂದಿದೆ. ಇಂದಿನ ದಿನಗಳಲ್ಲಿ ಕಳೆದುಹೋಗುತ್ತಿರುವ ನಮ್ಮ ಸಂಸ್ಕೃತಿ, ಸಂಭ್ರಮ, ದೇಸಿ ಕಲೆಗಳನ್ನು ಕಾಪಾಡುವ ಮಹತ್ಕಾರ್ಯವನ್ನು ಶ್ರೀಕ್ಷೇತ್ರ ಮಾಡುತ್ತಿದೆ ಎಂದರು. – ಮಂದಾರ

## ಪಂದ್ಯದಲ್ಲಿ ಸೋಲು-ಗೆಲುವು ಸಾಮಾನ್ಯ

ಗುರುಗಳನ್ನು ಕುರಿತು ನಾನು ಭಾರತಕ್ಕೆ ಹೋಗುತ್ತಿದ್ದೇನೆ, ನಿಮಗೆ ಏನು ತರಲಿ ಎಂದು ಕೇಳಿದಾಗ ಅಲ್ಲಿನ ಮಣ್ಣನ್ನು ತೆಗೆದುಕೊಂಡು ಬಾ ಎಂದು ಹೇಳಿದರು. ಅಲ್ಲಿಯ ಮಣ್ಣು ವಿಭೂತಿಗೆ ಸಮಾನ ಎಂದರು. ಕುಸ್ತಿಯಲ್ಲಿ ಸೋಲು ಗೆಲುವು ಸಾಮಾನ್ಯ ಅದನ್ನು ಅನುಸರಿಸಿಕೊಂಡು ಹೋಗಬೇಕು ಎಂದು ಕುಸ್ತಿ ಪಂದ್ಯಾವಳಿಯ ಬಗ್ಗೆ ಅಭಿಪ್ರಾಯ ಹಂಚಿಕೊಂಡರು. – ತೇಜ

# ಸಾಂಸ್ಕೃತಿಕ ಸ್ಪರ್ಧೆಗಳ ಫಲಿತಾಂಶ

ಶಾಸ್ತ್ರೀಯ ನೃತ್ಯ ಸ್ಪರ್ಧೆಯಲ್ಲಿ ಮೈಸೂರಿನ ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಪಡೆದು ಸಂಭ್ರಮಿಸಿದರು, ಮೈಸೂರಿನ ಬಾಲಜಗತ್ ಶಾಲೆಯ ವಿದ್ಯಾರ್ಥಿಗಳು ಎರಡನೇ ಬಹುಮಾನ ಗಿಟ್ಟಿಸಿದರು. ಬೆಂಗಳೂರಿನ ಜಯನಗರ ಶಾಲೆಯ ವಿದ್ಯಾರ್ಥಿಗಳು 3ನೇ ಬಹುಮಾನವನ್ನು ಪಡೆಯುವಲ್ಲಿ ಯಶಸ್ವಿಯಾದರು.

ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ ಮೈಸೂರಿನ ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಸುಶ್ರಾವ್ಯವಾಗಿ ಹಾಡಿ ಪಡೆಯುವಲ್ಲಿ ಯಶಸ್ವಿಯಾದರೆ, ಚಾಮರಾಜನಗರದ ಶಾಲೆಯ ವಿದ್ಯಾರ್ಥಿಗಳು ದ್ವಿತೀಯ ಬಹುಮಾನವನ್ನು ಗಿಟ್ಟಿಸಿದರು. ಮೂರನೇ ಬಹುಮಾನಕ್ಕೆ ಭಾಜನರಾದವರು ಮೈಸೂರಿನ ಬಾಲಜಗತ್ ಶಾಲೆಯ ವಿದ್ಯಾರ್ಥಿಗಳು.

ವಚನಾಧಾರಿತ ನೃತ್ಯ ಸ್ಪರ್ಧೆಯಲ್ಲಿ ಮೈಸೂರಿನ ಉದಯಗಿರಿ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಭಕ್ತಿಪರವಶರಾದವರಂತೆ ನೃತ್ಯ ಮಾಡುವ ಮೂಲಕ ಪಡೆದರೆ, ದ್ವಿತೀಯ ಬಹುಮಾನವನ್ನು ಬೆಂಗಳೂರಿನ ಜಯನಗರ ಶಾಲೆಯ ವಿದ್ಯಾರ್ಥಿಗಳು ಪಡೆದರು. ತೃತೀಯ ಬಹುಮಾನವನ್ನು ಮೈಸೂರಿನ ನಾಚನಹಳ್ಳಿಪಾಳ್ಯ ಶಾಲೆಯ ವಿದ್ಯಾರ್ಥಿಗಳು ಪಡೆಯುವಲ್ಲಿ ಯಶಸ್ವಿಯಾದರು.

**ಹೆಚ್ಚು ಅಂಕಗಳನ್ನು ಗಳಿಸಿದ ಮೈಸೂರಿನ ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಪರ್ಯಾಯ ಪಾರಿತೋಷಕವನ್ನು ಪಡೆದು ಸಂಭ್ರಮಿಸಿದರು.**

ಸಮೂಹ ನೃತ್ಯ ಸ್ಪರ್ಧೆಯಲ್ಲಿ ಬೆಂಗಳೂರಿನ ಜಯನಗರ ಶಾಲೆಯ ವಿದ್ಯಾರ್ಥಿಗಳು ಪ್ರೇಕ್ಷಕರು ಕಣ್ಣು ಮಿಟುಕಿಸದಂತೆ ಕುಣಿದು ಮೊದಲನೇ ಬಹುಮಾನವನ್ನು ಪಡೆದರೆ, ಎರಡನೇ

## ನಗರ ಪ್ರೌಢಶಾಲೆ ವಿಭಾಗ

ಬಹುಮಾನವನ್ನು ಚಾಮರಾಜನಗರದ ಜೆಎಸ್‌ಎಸ್ ಬಾಲಕರ ಶಾಲೆಯ ವಿದ್ಯಾರ್ಥಿಗಳು ಪಡೆದರು. ಮೂರನೇ ಬಹುಮಾನವನ್ನು ಮೈಸೂರಿನ ನಾಚನಹಳ್ಳಿಪಾಳ್ಯ ಶಾಲೆಯ ವಿದ್ಯಾರ್ಥಿಗಳು ಗಳಿಸಿ ಖುಷಿ ಪಟ್ಟರು. ನಾಲ್ಕನೇ ಬಹುಮಾನವನ್ನು ಮೈಸೂರಿನ ಮೇಟಗಳ್ಳಿ ಶಾಲೆಯ ವಿದ್ಯಾರ್ಥಿಗಳು ಮುಡಿಗೇರಿಸಿಕೊಂಡರು. ಬೆಂಗಳೂರಿನ ಕೋಣನಕುಂಟೆ ಶಾಲೆಯ ವಿದ್ಯಾರ್ಥಿಗಳು ಐದನೇ ಬಹುಮಾನಕ್ಕೆ ತೃಪ್ತಿಪಟ್ಟರು.





ಸಮೂಹ ಗಾಯನ ಸ್ಪರ್ಧೆಯಲ್ಲಿ ಚಾಮರಾಜನಗರದ ಜೆಎಸ್‌ಎಸ್ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಮುಡಿಗೇರಿಸಿಕೊಂಡರು. ಬೆಂಗಳೂರಿನ ಜಯನಗರ ಶಾಲೆಯ ವಿದ್ಯಾರ್ಥಿಗಳು ಎರಡನೇ ಬಹುಮಾನ ಪಡೆದು ನಲಿದರು. ಮೂರನೇ ಬಹುಮಾನವನ್ನು ಮೈಸೂರಿನ ಉದಯಗಿರಿ ಶಾಲೆಯ ವಿದ್ಯಾರ್ಥಿಗಳ ಪಾಲಾಯಿತು. ನಾಲ್ಕನೇ ಬಹುಮಾನವನ್ನು ಮೈಸೂರಿನ ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಪಡೆಯುವಲ್ಲಿ ಯಶಸ್ವಿಯಾದರು, ಐದನೇ ಬಹುಮಾನವನ್ನು ಮೈಸೂರಿನ ಬನ್ನಿಮಂಟಪದ ಶಾಲೆಯ ವಿದ್ಯಾರ್ಥಿಗಳು ಬಾಚಿಕೊಂಡರು.

ಸಮೂಹ ಶಾಸ್ತ್ರೀಯ ನೃತ್ಯ ಸ್ಪರ್ಧೆಯಲ್ಲಿ ಮೈಸೂರಿನ ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನ ಪಡೆದು ಕುಪ್ಪಳಿಸಿದರೆ, ದ್ವಿತೀಯ ಬಹುಮಾನವನ್ನು ಚಾಮರಾಜನಗರದ ಜೆಎಸ್‌ಎಸ್ ಬಾಲಕರ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಲಭ್ಯವಾಯಿತು. ಬೆಂಗಳೂರಿನ ಕೋಣನಕುಂಟೆ ಶಾಲೆಯ ವಿದ್ಯಾರ್ಥಿಗಳು ಮೂರನೇ ಬಹುಮಾನಕ್ಕೆ ಭಾಜನರಾದರು.

ಛಾಯಾಚಿತ್ರಗಳು: ವಾಟಾಳ್ ಆನಂದ್, ಬಿ.ಎನ್. ನಿಜಲಿಂಗಪ್ಪ, ಜಿ.ಎಸ್. ಜಯಶಂಕರಸ್ವಾಮಿ, ಮಂಜುನಾಥ್, ಸುತ್ತೂರು ನಂಜುಂಡನಾಯಕ

## ವಿದೇಶದಲ್ಲಿ ನೆಲೆಸಲು ಶ್ರೀಗಳೇ ಪ್ರೇರಣೆ

ಈ ಜಾತ್ರೆಯಲ್ಲಿನ ಸ್ವಚ್ಛತೆ, ಶಿಸ್ತು, ಬಹಳ ಅಚ್ಚುಕಟ್ಟಿನಿಂದ ಕೂಡಿದ್ದು, ಸಂಸ್ಥೆಯ ನೌಕರರು ಮತ್ತು ವಿದ್ಯಾರ್ಥಿಗಳ ಸ್ವಯಂ ಸೇವೆಯನ್ನು ಕಂಡು ನನಗೆ ಬಹಳ ಅಚ್ಚರಿಯಾಯಿತು. ಭಾರತದ ಅಭಿವೃದ್ಧಿಯಲ್ಲಿ ಶ್ರೀಮಠದ ಪಾತ್ರ ಮಹತ್ವವಾಗಿದೆ ಎಂದು ಆಸ್ಟ್ರೇಲಿಯಾದ ಶ್ರೀ ಶ್ರೀಶೈಲ ಹುಟಗಿಯವರು ತಿಳಿಸಿದರು.



ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪ ಸಮಾರಂಭದಲ್ಲಿ ಆಗಮಿಸಿ ಮಾತನಾಡಿದ ಅವರು ನಾವು ಎಲ್ಲೇ ಇದ್ದರು ನಮ್ಮ ನಾಡು –ನುಡಿ ಮತ್ತು ಸಂಸ್ಕೃತಿಯನ್ನು ಮರೆಯಬಾರದು. ಹೃದಯದಲ್ಲಿ ಪೂಜಿಸುವ ಶ್ರೀ ಸಿದ್ದೇಶ್ವರ ಸ್ವಾಮಿಗಳು ಹಾಗೂ ಸುತ್ತೂರು ಶ್ರೀಗಳವರೇ ನನ್ನ ಆದರ್ಶ ಗುರುಗಳಾಗಿದ್ದಾರೆ ಎಂದ ಅವರು ಪೂಜ್ಯರ ಆಶೀರ್ವಾದದಿಂದಲೇ ನಾವು ವಿದೇಶದಲ್ಲಿ ನೆಲೆಸಿ ಸಮಾಜ ಸೇವೆ ಮಾಡಲು ಸಾಧ್ಯವಾಗುತ್ತಿದೆ ಎಂದು ಹೇಳಿದರು. – ಅನುಷ ಪಿ.



ಕಪಿಲಾ ತೀರದಲ್ಲಿ ಶನಿವಾರ ರಾತ್ರಿ ಜರುಗಿದ ಶ್ರೀ ಶಿವರಾತ್ರೀಶ್ವರ ತೆಪ್ಪೋತ್ಸವ

## ಗ್ರಾಮೀಣ ಹೆಣ್ಣು ಮಕ್ಕಳ ಆಶಾಕಿರಣ ಶ್ರೀಮಠ

(ಮೊದಲ ಪುಟದಿಂದ)

ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪದಲ್ಲಿ ಮುಖ್ಯ ಅತಿಥಿಗಳಾಗಿದ್ದ ಅವರು ಮಾತನಾಡಿ ಸಂಕ್ರಾಂತಿ ಹಬ್ಬದ ನಂತರ ದೇವರ ಹೆಸರಿನಲ್ಲಿ ನಡೆಯುವ ಜಾತ್ರೆಗಳು ರೈತರಿಗೆ ಉಲ್ಲಾಸ ನೀಡುತ್ತವೆ. ಅದರಲ್ಲಿಯೂ ಸುತ್ತೂರು ಜಾತ್ರೆ ಹೆಚ್ಚು ಭಕ್ತಾಧಿಗಳನ್ನು ಆಕರ್ಷಿಸುವಂತಹ ಸಾಂಸ್ಕೃತಿಕ ಜಾತ್ರೆಯಾಗಿದ್ದು, ವೈವಿಧ್ಯತೆಯಿಂದ ಕೂಡಿರುವ ಈ ಜಾತ್ರೆಯಲ್ಲಿ ಸ್ವಚ್ಛತೆಗೆ ಹೆಚ್ಚು ಆದ್ಯತೆಯನ್ನು ನೀಡಲಾಗಿದೆ. ಶ್ರೀಮಠವು ಹನೂರು ಹಾಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಶಾಲಾ ಕಾಲೇಜುಗಳನ್ನು ತೆರೆದು ಶಿಕ್ಷಣಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ನೀಡಿದೆ ಹಾಗೂ ಜೆ. ಎಸ್. ಎಸ್. ಸಂಸ್ಥೆಯು ದೇಶ–ವಿದೇಶಗಳಲ್ಲಿಯೂ ಹೆಸರು ವಾಸಿಯಾಗಿದೆ ಶ್ರೀಮಠದ ಎಲ್ಲಾ ಕಾರ್ಯಗಳಿಗೆ ನನ್ನ ಭಕ್ತಿಯ ನಮನಗಳು ಎಂದು ಹೇಳಿದರು. – ಚಂದನ

## ಮಟ್ಟಿನಲ್ಲಿ ಪಟ್ಟುಬಿಡದ ಜಟ್ಟಿಗಳು



## ಶ್ರೀ ವಿಕಾಸ್ ಮಹದೇವಪುರ ಈ ಬಾರಿಯ ಸುತ್ತೂರು ಕುಮಾರ



## ಜಾತ್ರೆ... ಶಿಸ್ತುಬದ್ಧ... ಸುಪ್ರಸಿದ್ಧ...

ಸಾಂಸ್ಕೃತಿಕಮೇಳ ಹಾಗೂ ದನಗಳ ಜಾತ್ರೆ ಸಮಾರೋಪದಲ್ಲಿ ಅತಿಥಿಗಳಾಗಿದ್ದ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಶ್ರೀಮತಿ ಮಲ್ಲಿಗೆ ವೀರೇಶ್‌ರವರು ಮಾತನಾಡಿ ಹಲವಾರು ವರ್ಷಗಳಿಂದ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದೇನೆ. ವರ್ಷದಿಂದ ವರ್ಷಕ್ಕೆ ಜಾತ್ರೆಯು ಪ್ರಸಿದ್ಧಿಯಾಗಿದ್ದು, ದೇಶ ವಿದೇಶದಿಂದಲೂ ಜನರು ಬರುತ್ತಿದ್ದಾರೆ. ಮೈಸೂರು ಸಾಂಸ್ಕೃತಿಕ ಜಿಲ್ಲೆಯಾಗಿದ್ದು, ಶ್ರೀಮಠದ ಹೆಚ್ಚಿನ ಕಾರ್ಯಕ್ರಮಗಳು ನಡೆಯುವುದು ಸುತ್ತೂರಿನಲ್ಲಿ. ಶ್ರೀಕ್ಷೇತ್ರ ಶಿಸ್ತುಬದ್ಧವಾದ



ಧಾರ್ಮಿಕ ಸ್ಥಳ. ಬೇರೆ ರಾಜ್ಯಗಳಿಂದಲೂ ಮಕ್ಕಳು ಸುತ್ತೂರಿಗೆ ವ್ಯಾಸಂಗಮಾಡಲು ಬಂದಿದ್ದಾರೆ.

ಮಕ್ಕಳ ಶಿಸ್ತುಬದ್ಧ ವ್ಯಾಸಂಗ ಮತ್ತು ಸಂಸ್ಕೃತಿಯಿಂದ ವರ್ತಿಸುವ ಬಗೆ ನೋಡಿದರೆ ಖುಷಿಯಾಗುತ್ತದೆ. ಉಚಿತ ಶಿಕ್ಷಣ, ಊಟ, ವಸತಿ ವ್ಯವಸ್ಥೆಗಳನ್ನು ಪೂಜ್ಯ ಶ್ರೀಗಳು ಒದಗಿಸಿ ಮಕ್ಕಳ ಬದುಕಿಗೆ ದಾರಿದೀಪವಾಗಿದ್ದಾರೆ. ಕೃಷಿ ವಿಚಾರಸಂಕಿರಣವನ್ನು ಜಾತ್ರೆಯಲ್ಲಿ ಏರ್ಪಡಿಸಿರುವುದನ್ನು ನೋಡಿ ಬಹಳ ಸಂತೋಷವಾಗಿದೆ ಎಂದರು. –ಹರ್ಷಿತ ಎಂ.

## ಗುರುವಿಗೆ ಶರಣು ಶರಣಯ್ಯ ಶರಣು... –ಶ್ರೀ ಎಸ್. ಬಾಲರಾಜ್

ಪರಮಪೂಜ್ಯ ರಾಜೇಂದ್ರ ಶ್ರೀಗಳವರು ಗ್ರಾಮೀಣ ಬಡ ಮಕ್ಕಳಿಗೆ ಶಿಕ್ಷಣ ನೀಡಲು ತಮ್ಮ ಬದುಕನ್ನೇ ಮುಡಿಪಾಗಿಟ್ಟವರು. ಅದನ್ನು ಸಾಕಾರಗೊಳಿಸಲು ತಮ್ಮ ಚಿನ್ನದ ಕರಡಿಗೆಯನ್ನೇ ಅಡವಿಟ್ಟರು. ಅವರ ತ್ಯಾಗದ ಪ್ರತಿ ಫಲವಾಗಿ ಇಂದು ಜೆಎಸ್‌ಎಸ್ ಸಂಸ್ಥೆ ಜಗತ್ತಿನಾದ್ಯಂತ ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ ಎಂದು ಮಾಜಿ ಶಾಸಕರಾದ ಶ್ರೀ ಬಾಲರಾಜುರವರು ಹೇಳಿದರು.

ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪದಲ್ಲಿ ಮುಖ್ಯ ಅತಿಥಿಗಳಾಗಿದ್ದ ಅವರು "ಗುರುವಿಗೆ ಶರಣು ಶರಣಯ್ಯ ಶರಣು, ಗುರುವಿನ ಪಾದಕ್ಕೆ ಶರಣು ಶರಣಯ್ಯ ಶರಣು, ಶಿವರಾತ್ರೀಶ್ವರರ ಚರಣಕ್ಕೆ ಶರಣು, ಮಹಾದಾಸೋಹಕ್ಕೆ ಶರಣು ಶರಣಯ್ಯ ಶರಣು" ಎಂಬ



ಹಾಡಿನೊಂದಿಗೆ ಮಾತು ಪ್ರಾರಂಭಿಸಿದರು. ಗಂಗರು ಮತ್ತು ಚೋಳರ ನಡುವೆ ನಡೆಯಬಹುದಾಗಿದ್ದ ಯುದ್ಧವನ್ನು ತಪ್ಪಿಸಿ ಶಾಂತಿ ನೆಲೆಸುವಂತೆ ಮಾಡಿದ ಶಿವ ರಾತ್ರೀಶ್ವರರು ತಪೋಗೈದ ಪುಣ್ಯ ಭೂಮಿ ಇದು.

ಮನುಷ್ಯನಿಗೆ ಅರ್ಥವಾಗದಿರುವುದು ಮೂಕಪ್ರಾಣಿಗೆ ಅರ್ಥವಾಗುತ್ತದೆ ಎಂಬುದಕ್ಕೆ ನಿದರ್ಶನವೆಂಬಂತೆ ಚೋಳರಾಜನ ಕುದುರೆ ಓಂಕಾರ ಶಬ್ದದ ಆಕರ್ಷಣೆಗೆ ಒಳಗಾಗಿ ಮುಂದಕ್ಕೆ ಹೋಗದೆ ತಪಸ್ಸು ಮಾಡುತ್ತಿದ್ದ ಶಿವರಾತ್ರೀಶ್ವರರ ಸುತ್ತಲೂ ಪ್ರದಕ್ಷಿಣೆಯಾಕುತ್ತದೆ. ಆದ್ದರಿಂದ ಸುತ್ತೂರಿಗೆ ಪ್ರದಕ್ಷಣಾಪುರ ಎಂಬ ಹೆಸರು ಬಂತು ಎಂದು ಹೇಳಿದ ಅವರು ಈ ಐತಿಹಾಸಿಕ ಘಟನೆಯ ಕುರಿತು ತಾವು ಅಭಿನಯಿಸಿದ 'ಕಾಯಕತಪಸ್ವಿ' ನಾಟಕದ ಸಂಭಾಷಣೆಯನ್ನು ಹೇಳಿದರು. –ಶುಭಶ್ರೀ




ಸಾಂಸ್ಕೃತಿಕ ಸ್ಪರ್ಧೆಯ ಪ್ರೌಢಶಾಲಾ ವಿಭಾಗದಲ್ಲಿ 18ನೇ ಬಾರಿಗೆ ಸಮಗ್ರ ಪ್ರಶಸ್ತಿ ಗಳಿಸಿದ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಜಗದ್ಗುರು ವಚನಾನಂದ ಶ್ರೀಗಳವರು ಪ್ರಶಸ್ತಿ ವಿತರಿಸಿದರು. ಚಿತ್ರದಲ್ಲಿ ಶ್ರೀ ಸಾ.ರಾ. ಮಹೇಶ್. ಶ್ರೀ ಎಸ್. ಬಾಲರಾಜ್, ಶ್ರೀಮತಿ ಸಿ.ಪಿ. ನಿರ್ಮಲ, ಶ್ರೀ ಬಸವಲಿಂಗಯ್ಯ ಹಿರೇಮಠ್, ಶ್ರೀಮತಿ ನಾಗಲಕ್ಷ್ಮಿ ಮೊದಲಾದವರಿದ್ದಾರೆ.

Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore-570 015